ನವಸಾಕ್ಷರ ಪುಸ್ತಕ ಮಾಲೆ ೫೯

ಹಂದಿ ಸಾಕಣೆ

ಡಾ|| ಹೆಚ್. ಕೆ. ರಾಘವೇಂದ್ರರಾವ್



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನವಸಾಕ್ಷರ ಪುಸ್ತಕ ಮಾಲೆ

ಅಧ್ಯಕ್ಷರು
ಡಾ. ಚಂದ್ರಶೇಖರ ಕಂಬಾರ
ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ

ಶ್ರೀ ಲೂಕೋಸ್ ವಲ್ಲತರೈ ಐ. ಎ. ಎಸ್.
ನಿರ್ದೇಶಕರು, ಲೋಕಶಿಕ್ಷಣ ನಿರ್ದೇಶನಾಲಯ

ಉನ್ನತ ಸಲಹಾ ಸಮಿತಿ ಸದಸ್ಯರು

ಶ್ರೀಯುತರಾದ
ಹಾ. ಮಾ. ನಾಯಕ
ಎಚ್. ನರಸಿಂಹಯ್ಯ
ಜಿ. ನಾರಾಯಣ
ಎಲ್. ಎಸ್. ಶೇಷಗಿರಿರಾವ್
ಶಾಂತರಸ
ಕೆ. ವಿ. ಸುಬ್ಬಣ್ಣ
ಗೊ. ರು. ಚನ್ನಬಸಪ್ಪ
ಪಿ. ಎಸ್. ಶಂಕರ್
ಶಿವಶಂಕರ ಹಿರೇಮಠ
ಆರ್. ಎಸ್. ರಾಜಾರಾಮ್
ಶ್ರೀಮತಿ ಎಲ್. ಜಿ. ಸುಮಿತ್ರ

ಸಂಪಾದಕ ಸಮಿತಿ

ಶ್ರೀಯುತರಾದ
ಎಸ್. ಜಿ. ನಾಗಲೋಟಿಮಠ
ಕೆ. ವಿ. ನಾರಾಯಣ
ಪುರುಷೋತ್ತಮ ಬಿಳಿಮಲೆ
ಕರೀಗೌಡ ಬೀಚನಹಳ್ಳಿ
ಅಮೃತ ಸೋಮೇಶ್ವರ
ಸಿ. ಆರ್. ಚಂದ್ರಶೇಖರ್
ಬಿ. ಎ. ಶ್ರೀಧರ
ಲಿಂಗದೇವರು ಹಳೆಮನೆ
ಭ. ಮಲ್ಲಿಕಾರ್ಜುನ
ಮಹಾಬಲೇಶ್ವರರಾವ್
ಭಕ್ತಪ್ರಿಯ
ಎಂ. ಪಿ. ಪರಮಶೇಖರಯ್ಯ
ಶ್ರೀಮತಿ ಉಷಾ ರಾಂಕುಮಾರ್

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ-೫೯

ಹಂದಿ ಸಾಕಣೆ

ಡಾ॥ ಹೆಚ್. ಕೆ. ರಾಘವೇಂದ್ರರಾವ್

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೧೧

HANDI SAKANE : By Dr. H. K. Raghavendra Rao. Published by The Director of Prasaranga, Kannada University, Hampi - 583 211, KARNATAKA.
First Impression 1994, Pp. ii + 26, Rs. 8.00

ಸಂಯೋಜನಾಧಿಕಾರಿ
ಡಾ|| ಎಚ್. ಎಸ್. ಶ್ರೀಮತಿ
ಪಠ್ಯಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ ೮.೦೦

ಮುದ್ರಕರು
ಪ್ರಿಂಟ್‌ಪ್ಯಾಕ್
ದೇವಯಾನಿ ಇಂಡಸ್ಟ್ರಿಯಲ್ ಕಾಂಪ್ಲೆಕ್ಸ್, ೨೮/೨, ಗೌಡನಪಾಳ್ಯ,
ಸುಬ್ರಹ್ಮಣ್ಯಪುರ ರಸ್ತೆ, ಬೆಂಗಳೂರು-೫೬೦ ೦೬೧.

ಹಂದಿ ಸಾಕಣೆ

ಹಂದಿ ಸಾಕಣೆಯ ಮಹತ್ವ

ಹಂದಿಸಾಕಣೆ ನಮಗೆ ಹೊಸತೇನಲ್ಲ. ಹಂದಿಸಾಕಣೆ ರೈತನಿಗೆ ಹೆಚ್ಚು ಲಾಭ ಕೊಡುವ ಉದ್ಯಮ. ಹೈನುಗಾರಿಕೆ, ಕೋಳಿಸಾಕಣೆ, ಕುರಿಸಾಕಣೆಗಳಿಗಿಂತ ಹಂದಿಸಾಕಣೆ ವಿಧಾನಗಳು ಸುಲಭ. ಸಂತಾನಾಭಿವೃದ್ಧಿ ಮತ್ತು ಆರ್ಥಿಕ ಲಾಭ ಮಾತ್ರ ಗಮನಿಸೋಣ. ಒಂದು ಹಸು ಚೆನ್ನಾಗಿ ಸಾಕಿದರೂ ವರ್ಷಕ್ಕೆ ಒಂದು ಬಾರಿ ಕರು ಹಾಕುತ್ತದೆ. ಹೆಣ್ಣು ಕರು ಹುಟ್ಟಿದರೆ ಮಾತ್ರ ರೈತನಿಗೆ ಸಂತೋಷ! ಹೋರಿ ಕರುವಾದರೆ ನಿರಾಶೆ! ಹಾಲು ಕೊಡುವುದು ಹಸು ತಾನೇ? ಹೋರಿಯಲ್ಲವಲ್ಲ! ಒಮ್ಮೆ ಹಸುವಿಗೆ ಕೆಚ್ಚಲುಬಾವು ಆಗಿ ವಾಸಿಯಾಗದಿದ್ದರೆ ರೈತನಿಗೆ ಅಪಾರ ನಷ್ಟವಾಗುತ್ತದೆ. ಹಾಲು ಕೊಡದ ಹಸುವನ್ನು ಸಾಕಲಾರ, ಇಟ್ಟುಕೊಳ್ಳಲಾರ. ಕೊನೆಗೆ ಅದನ್ನು ಕಟುಕರಿಗೆ ಎಂಟುನೂರು ಅಥವಾ ಸಾವಿರ ರೂಪಾಯಿಗಳಿಗೆ ಮಾರುತ್ತಾನೆ.

ಹಂದಿಯ ಸಂತಾನ ಕ್ರಮ ಹಾಗಲ್ಲ. ವರ್ಷಕ್ಕೆ ಎರಡು ಬಾರಿ ಮರಿ ಹಾಕುತ್ತದೆ. ಒಮ್ಮೆಲೆ ಎಂಟು - ಹತ್ತು ಮರಿಗಳನ್ನು ಈಯುತ್ತದೆ. ಶೀಘ್ರ ಬೆಳವಣಿಗೆ ಹೊಂದುತ್ತದೆ. ಹೆಣ್ಣಾಗಲಿ, ಗಂಡಾಗಲಿ ಮಾರುಕಟ್ಟೆ ಬೆಲೆ ಒಂದೇ. ಹಂದಿಗೆ ಆರೋಗ್ಯ ಕೆಟ್ಟಾಗ ಹಸುವಿನಂತೆ ಅನೇಕ ದಿನಗಳು ಚಿಕಿತ್ಸೆ ಕೊಡಿಸುವುದಿಲ್ಲ. ಎರಡು - ಮೂರು ದಿನ ಚಿಕಿತ್ಸೆ



ಗುಟುರ್.... ಗುಟುರ್... ಎನ್ನುವ ಬಲಿತ ಹಂದಿ

ಮಾಡಿಸಿ ವಾಸಿಯಾಗದಿದ್ದರೆ ಮಾಂಸಕ್ಕಾಗಿ ಕಟಾವಿಗೆ ಕೊಡಬಹುದು. ರೈತನಿಗೆ ನಷ್ಟವಿಲ್ಲ. ಹಂದಿಯು ತಿನ್ನುವ ಆಹಾರ ಬಹಳ ಬೇಗ ಉತ್ತಮ ಮಾಂಸವಾಗಿ ಬಿಡುತ್ತದೆ. ಹಂದಿಯಿಂದ ದೊರೆಯುವಷ್ಟು ಮಾಂಸ ಇತರ ಸಾಕು ಪ್ರಾಣಿಗಳಿಂದ ದೊರೆಯುವುದಿಲ್ಲ. ಉತ್ತಮ ಆಹಾರ ಪರಿವರ್ತನಾ ಸಾಮರ್ಥ್ಯ ಅಂದರೆ ತಿಂದ ಆಹಾರವನ್ನು ಉತ್ತಮ ಮಾಂಸವಾಗಿ ಪರಿವರ್ತಿಸುವುದು ಅದ್ಭುತ. ಮಾಂಸದ ಇಳುವರಿ ಶೇಕಡಾ ಎಪ್ಪತ್ತೈದರಿಂದ ಎಂಬತ್ತು. ಇಷ್ಟು ಮಾಂಸ ಇಳುವರಿ ಕೊಡುವ ಸಾಕುಪ್ರಾಣಿ ಇನ್ನೊಂದಿಲ್ಲ.

ಕುರಿ, ಕೋಳಿಗಳಂತಹ ಇತರ ಪ್ರಾಣಿಗಳ ಮಾಂಸಕ್ಕಿಂತ ಹಂದಿ ಮಾಂಸ ಸುಲಭ ಬೆಲೆಗೆ ದೊರೆಯುತ್ತದೆ. ಜನಸಾಮಾನ್ಯರಿಗೆ ಹಂದಿಮಾಂಸ ಕೊಳ್ಳುವುದು ದುಬಾರಿಯಾಗಿ ಕಾಣುವುದಿಲ್ಲ. ಹಂದಿಮಾಂಸಕ್ಕೆ ಮಾರುಕಟ್ಟೆ ಬೇಡಿಕೆ ಅಪಾರ. ಬೇಡಿಕೆಗೆ ತಕ್ಕಷ್ಟು ಹಂದಿಮಾಂಸ ಸಿಗುತ್ತಿಲ್ಲ.

ಇಷ್ಟೇ ಇಲ್ಲ. ಹಂದಿಸಾಕಣೆಯಿಂದ ನಮಗೆ ಇನ್ನೂ ಅನೇಕ ಪ್ರಯೋಜನಗಳಿವೆ. ಹಂದಿಯ ಮೂಳೆಗಳನ್ನು ಮೂಳೆಪುಡಿ ತಯಾರಿಸಲು ಹಾಗೂ ಸಕ್ಕರೆಯನ್ನು ಶುದ್ಧಮಾಡಲು ಉಪಯೋಗಿಸುತ್ತಾರೆ. ಕೃತಕ ಗೊಬ್ಬರಗಳಿಗಿಂತ ಹಂದಿಯ ಗೊಬ್ಬರ ಮತ್ತು ಮೂತ್ರ ಭೂಮಿಯನ್ನು ಹೆಚ್ಚು ಫಲವತ್ತಾಗಿಸುತ್ತದೆ. ಹಂದಿಯ ಕೂದಲುಗಳಿಂದ ಉತ್ತಮ ಮಟ್ಟದ ಬಣ್ಣ ಬಳೆಯುವ ಬ್ರಶ್‌ಗಳನ್ನು ತಯಾರಿಸಬಹುದು. ಹಂದಿಯ ಗೊರಸುಗಳಿಂದ ಗುಂಡಿ ಮತ್ತು ಗೋಂದನ್ನು ಸಹ ತಯಾರಿಸಬಹುದು.

ಕರ್ನಾಟಕ ಸರ್ಕಾರ ಅನೇಕ ಕಡೆಗಳಲ್ಲಿ ಹಂದಿ ಸಂವರ್ಧನಾ ಕೇಂದ್ರಗಳನ್ನು ಸ್ಥಾಪಿಸಿದೆ. ವಿದೇಶಿ ತಳಿಗಳನ್ನು ಸಾಕಿ ಮರಿಗಳನ್ನು ರೈತರಿಗೆ ಹಂಚಿದೆ. ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯ ಸಹ ಉತ್ತಮ ತಳಿಯ ಹಂದಿ ಸಂವರ್ಧನಾ ಕೇಂದ್ರ ಹೊಂದಿದೆ. ಈ ಹಂದಿಮರಿಗಳನ್ನು ರಾಜ್ಯದ, ನೆರೆರಾಜ್ಯಗಳ ರೈತರಿಗೆ ಸರಬರಾಜು ಮಾಡಲಾಗುತ್ತಿದೆ.

ಕರ್ನಾಟಕದ ಎಲ್ಲೆಡೆ ಒಂದೇ ರೀತಿ ಹಂದಿಸಾಕಣೆ ಮಾಡುತ್ತಿದ್ದಾರೆಯೇ? ಇಲ್ಲ. ಮಿಶ್ರತಳಿ ಮತ್ತು ವಿದೇಶಿ ಹಂದಿಗಳು ದಕ್ಷಿಣದ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬಂದಿವೆ. ಉತ್ತರದ ಜಿಲ್ಲೆಗಳಲ್ಲಿ ಕಡಿಮೆ. ಬಹುಶಃ ಹಂದಿಸಾಕಣೆಯ ಬಗ್ಗೆ ಅಗತ್ಯ ಮಾಹಿತಿಗಳ ಕೊರತೆ ಇದ್ದದ್ದೇ ಕಾರಣವಾಗಿರಬಹುದು.

ಈಗ ಕರ್ನಾಟಕ ಸರ್ಕಾರ ಹಂದಿಸಾಕಣೆಯನ್ನು ಅಭಿವೃದ್ಧಿಪಡಿಸಲು ಹಾಗೂ ಜನಪ್ರಿಯಗೊಳಿಸಲು ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದೆ. ಆಸಕ್ತಿ ತೋರುವ ರೈತರಿಗೆ ಹಳ್ಳಿ ಅಥವಾ ಪಟ್ಟಣಿಗರು ಯಾರೇ ಆಗಿರಲಿ, ಭೂ ಅಭಿವೃದ್ಧಿ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳು ಹೆಚ್ಚಿನ ಪ್ರಮಾಣದಲ್ಲಿ ಸಾಲ ಸೌಲಭ್ಯ ಒದಗಿಸುತ್ತಿವೆ. ಅಲ್ಲದೆ, ಹಂದಿಸಾಕಣೆಯ ಬಗ್ಗೆ ರೈತರಿಗೆ ಅವಶ್ಯವಾದ ತರಬೇತಿ ನೀಡುವ ಬಗ್ಗೆ ಸಹ ಆಲೋಚಿಸಲಾಗುತ್ತಿದೆ.

ಇದುವರೆಗೆ ಹಂದಿಸಾಕಣೆಯ ಮಹತ್ವವನ್ನು ತಿಳಿದದ್ದಾಯಿತು. ಇನ್ನು ಹಂದಿಯ ತಳಿಗಳು, ವಸತಿ, ಆಹಾರ, ಸಂತಾನಾಭಿವೃದ್ಧಿ ಮತ್ತು ರೋಗಗಳ ಹತೋಟಿ ಕ್ರಮಗಳನ್ನು ತಿಳಿದುಕೊಳ್ಳೋಣ.

ಹಂದಿ ತಳಿಗಳು

ಹಂದಿಗಳನ್ನು ಅವುಗಳಿಂದ ಬರುವ ಉತ್ಪನ್ನಕ್ಕೆ ಅನುಗುಣವಾಗಿ ಮೂರು ಗುಂಪುಗಳಾಗಿ ವಿಂಗಡಿಸಬಹುದು. ಮಾಂಸದ ತಳಿಗಳು, ಮಾಂಸ ಮತ್ತು ಕೊಬ್ಬಿನ ತಳಿಗಳು ಮತ್ತು ಕೊಬ್ಬಿನ ತಳಿಗಳು.

ಮಾಂಸದ ತಳಿಗಳು

ಉತ್ಕೃಷ್ಟ ಹಾಗೂ ರುಚಿಕರ ಮಾಂಸ ಕೊಡುತ್ತವೆ. ಮಾಂಸದ ಇಳುವರಿ ಶೇಕಡಾ ಎಪ್ಪತ್ತರಿಂದ ಎಂಬತ್ತರಷ್ಟು ಬರುತ್ತದೆ. ಮಾಂಸಖಂಡಗಳ ಎಳೆಗಳ ಮಧ್ಯೆ ಕೊಬ್ಬಿನಂಶ ಬಹಳ ಕಡಿಮೆ ಇರುತ್ತದೆ. ಬೆನ್ನಿನ ಮೇಲೆ ಮತ್ತು ಪಕ್ಕೆಗಳಲ್ಲಿ ಕೊಬ್ಬಿನ ಪದರ ಎರಡು ಸೆಂಟಿಮೀಟರಿಗಿಂತ ಹೆಚ್ಚಿರುವುದಿಲ್ಲ. ಉದಾ: ಲಾರ್ಜ್‌ವೈಟ್ (ಯಾರ್ಕ್‌ಶೈರ್), ಬರ್ಕ್‌ಶೈರ್, ಲ್ಯಾಂಡ್‌ರೇಸ್, ಘೋರಿ, ಅಂಕಾಯಲಿ ಹಾಗೂ ಸ್ಥಳೀಯ ತಳಿಗಳು.

ಮಾಂಸ ಮತ್ತು ಕೊಬ್ಬಿನ ತಳಿಗಳು

ಇವುಗಳ ಮಾಂಸದ ಎಳೆಗಳ ಮಧ್ಯದಲ್ಲಿ ಕೊಬ್ಬಿನಂಶ ಹೆಚ್ಚು ಇರುತ್ತದೆ. ಪಕ್ಕೆ ಮತ್ತು ಬೆನ್ನು ಹುರಿಯಲ್ಲಿ ಕೊಬ್ಬಿನಂಶದ ಪದರ ಎರಡರಿಂದ ನಾಲ್ಕು ಸೆಂಟಿಮೀಟರ್ ದಪ್ಪನಾಗಿರುತ್ತದೆ.

ಕೊಬ್ಬಿನ ತಳಿಗಳು

ಇವುಗಳ ಮಾಂಸದ ಪದರಗಳಲ್ಲಿ ಕೊಬ್ಬಿನ ಪದರ ನಾಲ್ಕರಿಂದ ಏಳು ಸೆಂಟಿಮೀಟರ್ ಇರುತ್ತದೆ. ರುಚಿ ಕಡಿಮೆಯಿರುವುದರಿಂದ ಇದಕ್ಕೆ ಬೇಡಿಕೆಯಿಲ್ಲ. ಇದರಿಂದ ದೊರೆಯುವ ಕೊಬ್ಬನ್ನು ಖಾದ್ಯ ತೈಲಗಳೊಂದಿಗೆ ಬೆರೆಸಿ ಉಪಯೋಗಿಸುತ್ತಾರೆ. ಮಲರೋಗಿಗಳಲ್ಲಿ ರಕ್ತಸ್ರಾವ ಆದಾಗ ಇದರ ಕೊಬ್ಬನ್ನು ಉಪಯೋಗಿಸಿದರೆ ರಕ್ತಸ್ರಾವ ಕಡಿಮೆಯಾಗುತ್ತದೆ ಎಂದು ಜನರ ಹೇಳಿಕೆ. ಇದಕ್ಕೆ ಸರಿಯಾದ ಪುರಾವೆಗಳಿಲ್ಲ.

ದೇಶೀಯ ತಳಿಗಳು

ನಮ್ಮ ದೇಶದಲ್ಲಿ ಮಾಂಸಕ್ಕೆ ಪ್ರಸಿದ್ಧಿಯಾಗಿರುವ ತಳಿಗಳು ದೇಶಿ, ಘೋರಿ ಮತ್ತು ಅಂಕಾಮಲಿ.

ದೇಶಿತಳಿ

ಇವು ಉತ್ತರ ಭಾರತದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಉತ್ತರ ಪ್ರದೇಶ, ಪಂಜಾಬ್, ಬಿಹಾರ್, ಹರಿಯಾಣ, ದೆಹಲಿಯಲ್ಲಿ ಇವುಗಳ ಸಂಖ್ಯೆ ಹೆಚ್ಚು. ದೇಶೀಯ ತಳಿಗಳಲ್ಲಿ ಇದರ ಗಾತ್ರ, ಭಾರ ಅತಿ ಹೆಚ್ಚು. ಚೆನ್ನಾಗಿ ಬೆಳೆದ ಹಂದಿ ನೂರಾ ಅರವತ್ತರಿಂದ ನೂರಾ ಎಂಬತ್ತು ಕಿಲೋ ತೂಗುತ್ತದೆ. ಉತ್ತಮ, ರುಚಿಕರ ಮಾಂಸ ಪಡೆಯಬಹುದು.

ಮೈ ಬಣ್ಣ ಕಪ್ಪು, ಕಂದು ಅಥವಾ ಕೆಂಪು ಮಿಶ್ರಿತ ಬಿಳಿಪಟ್ಟಿ ಹೊಂದಿರುತ್ತದೆ. ಒಮ್ಮೆಲೇ ಸುಮಾರು ಎಂಟರಿಂದ ಹನ್ನೆರಡು ಮರಿಗಳನ್ನು ಈಯುತ್ತದೆ.

ಘೋರಿ ತಳಿ

ಇವು ಸಾಮಾನ್ಯವಾಗಿ ಮಣಿಪುರ, ಅಸ್ಸಾಂ, ನಾಗಾಲ್ಯಾಂಡ್, ಮಿಜೋರಾಂ, ಸಿಕ್ಕಿಂ, ಅರುಣಾಚಲ ಪ್ರದೇಶಗಳಲ್ಲಿ ಕಂಡುಬರುತ್ತದೆ. ಶರೀರ ತೂಕ ಮೂವತ್ತೈದರಿಂದ ಎಪ್ಪತ್ತು ಕೆ.ಜಿ ರುಚಿಕರ ಮಾಂಸ ದೊರೆಯುತ್ತದೆ. ಮೈಬಣ್ಣ ತಿಳಿಕಂದು ಅಥವಾ ಕಪ್ಪು, ಕುತ್ತಿಗೆಯಿಂದ ಬೆನ್ನಿನ ಉದ್ದಕ್ಕೂ ಒರಟಾದ ಕೂದಲು ನೆಟ್ಟಗೆ ನಿಂತಿರುತ್ತದೆ. ಬಾಲ ಉದ್ದವಾಗಿದ್ದು ಕೊನೆಯಲ್ಲಿ ಕೂದಲುಗಳು ಕುಂಚದ ಆಕಾರದಲ್ಲಿರುತ್ತದೆ.

ಅಂಕಾಮಲಿ ತಳಿ

ದಕ್ಷಿಣ ಭಾರತದ ಎಲ್ಲಾ ರಾಜ್ಯಗಳಲ್ಲೂ ಕಂಡುಬರುತ್ತವೆ. ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲೂ ಕಾಣಬಹುದು. ಕೊಡಗು, ಕೋಲಾರ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಮಧ್ಯಮ ಗಾತ್ರದ ಶರೀರ ಹೊಂದಿರುತ್ತವೆ. ಶರೀರ ತೂಕ ಐವತ್ತರಿಂದ ಎಪ್ಪತ್ತೈದು ಕೆ.ಜಿ ಇರುತ್ತದೆ. ಮೈಮೇಲೆ ಒರಟಾದ ದಪ್ಪಕೂದಲು ಬೆಳೆದಿರುತ್ತದೆ. ಮೈಬಣ್ಣ ಕಂದು, ಕಪ್ಪು ಮೈ ಮೇಲೆ ಬಿಳಿ ಮಚ್ಚೆಗಳು, ಕಪ್ಪುಮಿಶ್ರಿತ ಬಿಳಿ ಅಥವಾ ಕಪ್ಪಾಗಿರುತ್ತದೆ. ಈ ತಳಿಯ ಹಂದಿಯ ಹಿಂಭಾಗ, ಮುಂಭಾಗಕ್ಕಿಂತ ಎತ್ತರವಾಗಿರುತ್ತದೆ. ಮರಿಗಳನ್ನು ಅಕ್ಕರೆಯಿಂದ ಸಾಕುತ್ತದೆ. ವೈರಿಗಳಿಂದ ಸಂರಕ್ಷಿಸುತ್ತದೆ. ಒಂದು ಬಾರಿಗೆ ಆರರಿಂದ - ಹನ್ನೆರಡು ಮರಿಗಳನ್ನು ಈಯುತ್ತದೆ.

ಮಿಶ್ರ ತಳಿಗಳು

ಸಾಮಾನ್ಯವಾಗಿ ಸ್ಥಳೀಯ ಹೆಣ್ಣು ಮತ್ತು ಉತ್ತಮ ವಿದೇಶಿ ತಳಿಯ ಗಂಡುಹಂದಿಗಳನ್ನು ಜೋಡಿ ಮಾಡಿ ಮಿಶ್ರತಳಿ ಪಡೆಯಬಹುದು. ಕರ್ನಾಟಕದಲ್ಲಿ

ಬೆಂಗಳೂರು, ಮೈಸೂರು, ತುಮಕೂರು, ಕೊಡಗು, ದಕ್ಷಿಣ ಕನ್ನಡ, ಮಂಡ್ಯ, ಕೋಲಾರ ಜಿಲ್ಲೆಗಳಲ್ಲಿ ಮಿಶ್ರತಳಿ ಹಂದಿಗಳ ಸಂಖ್ಯೆ ಹೆಚ್ಚು. ಮಿಶ್ರತಳಿ ಸಂವರ್ಧನೆ ಎಲ್ಲೆಡೆ ಜನಪ್ರಿಯವಾಗುತ್ತಿದೆ. ಈ ತಳಿಗಳು ಗಾತ್ರದಲ್ಲಿ ದೇಶಿಹಂದಿಗಳಿಗಿಂತಲೂ ದೊಡ್ಡದಾಗಿರುತ್ತವೆ. ವಿದೇಶಿ ಹಂದಿಗಳಿಗಿಂತ ಚಿಕ್ಕದಾಗಿರುತ್ತದೆ.

ಇವು ಆರೋಗ್ಯದಲ್ಲಿ ಗಟ್ಟಿಮುಟ್ಟಾಗಿದ್ದು ಹೆಚ್ಚಿನ ರೋಗ ನಿರೋಧಕ ಶಕ್ತಿ ಹೊಂದಿರುತ್ತವೆ. ಮೈ ಬಣ್ಣ ಕಪ್ಪು ಮತ್ತು ಬಿಳಿ ಮಿಶ್ರಿತ, ಕಪ್ಪು ಅಥವಾ ಬಿಳಿ ಇರುತ್ತದೆ. ಇವುಗಳ ಗುಣ ವಿಶೇಷ - ಹೆಚ್ಚು ಸಂಖ್ಯೆಯ ಮರಿಗಳನ್ನು ಈಯುವುದು, ಮರಿಗಳಿಗೆ ಹಾಲೂಡಿಸಿ ಆರೈಕೆ ಮಾಡುವುದು, ಉತ್ತಮ ಆಹಾರ ಪರಿವರ್ತನಾ ಸಾಮರ್ಥ್ಯ, ಕಷ್ಟ ಸಹಿಷ್ಣುತೆಯನ್ನು ಹೊಂದಿರುತ್ತವೆ.

ವಿದೇಶಿ ತಳಿ ಹಂದಿಗಳು

ಇವುಗಳಲ್ಲಿ ಮುಖ್ಯವಾದುವು ಲಾರ್ಜ್‌ವೈಟ್, ಮಿಡಲ್‌ವೈಟ್, ಯಾರ್ಕ್‌ಶೈರ್, ಲ್ಯಾಂಡ್‌ರೇಸ್, ಬರ್ಕ್‌ಶೈರ್, ಹ್ಯಾಂಶೈರ್, ವೆಸೆಕ್ಸ್ ಸ್ಯಾಡಲ್ ಬ್ಯಾಕ್, ಟಾಂವರ್ತ್, ಪೋಲೆಂಡ್ ಚೈನಾ ಮತ್ತು ಡ್ಯುರಾಕ್ ತಳಿಗಳು.

ಇವುಗಳ ಗುಣ ವಿಶೇಷಗಳು ಹಲವಾರು, ಶೀಘ್ರವಾಗಿ ಬೆಳೆಯುತ್ತವೆ. ಕಡಮೆ ವಯಸ್ಸಿನಲ್ಲಿ ಪ್ರಾಯಕ್ಕೆ ಬರುತ್ತವೆ. ಹೆಚ್ಚಿನ ಸಂಖ್ಯೆಯಲ್ಲಿ ಮರಿಗಳನ್ನು ಈಯುತ್ತವೆ. ಹೆಚ್ಚು ಹಾಲು ಉತ್ಪಾದನೆ ಮರಿಗಳ ಪಾಲನೆಗೆ ಸಹಾಯಕವಾಗುತ್ತದೆ. ಆರರಿಂದ ಎಂಟು ತಿಂಗಳಲ್ಲಿ ಅರವತ್ತೈದರಿಂದ ಎಂಬತ್ತೈದು ಕಿಲೋ ತೂಗುತ್ತದೆ. ನಮ್ಮ ದೇಶದ ಹವಾಗುಣಕ್ಕೆ, ಪರಿಸರಕ್ಕೆ ಹೊಂದಿಕೊಂಡಿವೆ. ಇವುಗಳಲ್ಲಿ ಬಹಳ ಜನಪ್ರಿಯವಾಗಿರುವುವು ಲಾರ್ಜ್‌ವೈಟ್ ಮತ್ತು ಲ್ಯಾಂಡ್ ರೇಸ್ ಮಾತ್ರ- ಇವುಗಳ ಸಮ ಬೇರೆ ಇಲ್ಲ. ಇವುಗಳಿಂದ ಸ್ಥಳೀಯ ಹಂದಿಗಳೊಂದಿಗೆ ಸಂಕರಣ ಮಾಡಿಸಿ ಮಿಶ್ರತಳಿ ಪಡೆಯಬಹುದು. ಇಂತಹ ಮಿಶ್ರತಳಿಗಳೂ ನಮ್ಮಲ್ಲಿ ಬಹಳ ಜನಪ್ರಿಯವಾಗಿದೆ.

ಲಾರ್ಜ್‌ವೈಟ್ (ಯಾರ್ಕ್‌ಶೈರ್)

ಇಂಗ್ಲೆಂಡಿನ ಯಾರ್ಕ್‌ಶೈರ್ ಪ್ರಾಂತ್ಯ ಈ ತಳಿಯ ಮೂಲ. ಆ ಕಾರಣ ಈ ಹೆಸರು ಬಂತು. ಮೈ ಬಣ್ಣ ಅಚ್ಚ ಬಿಳುಪು ಅಥವಾ ನಸುಗೆಂಪು. ಶರೀರ ನೀಳವಾಗಿರುತ್ತದೆ. ಅಗಲ ಕಿವಿಗಳು ನಿಗರಿ ನಿಂತಿರುತ್ತವೆ. ಚಿಕ್ಕದಾದ ಬಾಲ ಸುರಳಿಗೊಂಡಿರುತ್ತದೆ. ಕಾಲುಗಳು ಗಿಡ್ಡವಾಗಿದ್ದರೂ ಗಟ್ಟಿಮುಟ್ಟಾಗಿರುತ್ತವೆ. ಮೈಮೇಲೆ ಸಣ್ಣ ಕೂದಲುಗಳಿರುತ್ತವೆ. ದಟ್ಟವಾಗಿರುವುದಿಲ್ಲ. ಈ ತಳಿಯ ಗುಣ ವಿಶೇಷ ಉತ್ತಮ ಆಹಾರ ಪರಿವರ್ತನಾ ಸಾಮರ್ಥ್ಯ ಮತ್ತು ಶೀಘ್ರ ಬೆಳವಣಿಗೆ ಉದಾ: ಹುಟ್ಟಿದ ಮರಿ ಒಂದೂವರೆ ಕೆ.ಜಿ, ಎರಡು ತಿಂಗಳಲ್ಲಿ ಹತ್ತರಿಂದ ಹನ್ನೆರಡು ಕೆ.ಜಿ, ಆರು ತಿಂಗಳಲ್ಲಿ ಐವತ್ತರಿಂದ ಅರವತ್ತು ಕೆ.ಜಿ, ಎಂಟು ತಿಂಗಳಲ್ಲಿ ಎಂಬತ್ತರಿಂದ ತೊಂಬತ್ತು ಕೆ.ಜಿ ಶರೀರ ತೂಕ ಪಡೆಯುತ್ತವೆ.

ಉತ್ತಮ ಬೆಳವಣಿಗೆ ಬರಬೇಕಾದರೆ ನಿರ್ವಹಣೆ ಸಹ ಅತ್ಯುತ್ತಮವಾಗಿರಬೇಕು ಎಂಬುದನ್ನು ರೈತರು ಮರೆಯಬಾರದು. ಆರೈಕೆಯಲ್ಲಿ ನಿರ್ಲಕ್ಷ್ಯ ಸಲ್ಲದು. ಬೆಂಗಳೂರಿನ ಹೆಬ್ಬಾಳದ ಹಂದಿ ಸಾಕಣೆ ಕೇಂದ್ರದಲ್ಲಿ ಎಂಟು ತಿಂಗಳ ಪ್ರಾಯದಲ್ಲಿ ತೊಂಬತ್ತೊಂಬತ್ತು ಕೆ.ಜಿ ತೂಗಿದ ದಾಖಲೆಯಿದೆ.

ಯಾರ್ಕ್‌ಶೈರ್ ತಳಿ ಒಂದು ಬಾರಿಗೆ ಎಂಟರಿಂದ ಹನ್ನೆರಡು ಮರಿಗಳನ್ನು ಈಯುತ್ತದೆ. ಉತ್ತಮ ತಾಯಿಗುಣ ಹೊಂದಿದೆ. ಆದರೆ ಈ ಹಂದಿಗಳು ಹೆಚ್ಚಿನ ಉಷ್ಣತೆ ತಾಳಲಾರವು. ಹಂದಿಗಳಲ್ಲಿ ಬೆವರು ಗ್ರಂಥಿಗಳು ಎಂಬುದು ಮುಖ್ಯಕಾರಣ. ಹಾಗಾಗಿ ಬೇಸಿಗೆಯಲ್ಲಿ ಶರೀರದ ಉಷ್ಣಾಂಶ ಹೆಚ್ಚುತ್ತದೆ. ಹಂದಿಗೆ ತಾಪ ತಾಳಲಾಗದೆ ನೀರಿನಲ್ಲಿ ಮಲಗಲು ಆಸೆ ಪಡುತ್ತದೆ. ಉಷ್ಣಾಂಶ ಹೆಚ್ಚಾದಾಗ ಬೆನ್ನಿನ ಮೇಲೆ ಆಗಾಗ್ಗೆ ತಣ್ಣೀರು ಸುರಿಯುತ್ತಿರಬೇಕು. ಹಂದಿಯೂ ನಮ್ಮಂತೆಯೇ ಶುಭ್ರಪ್ರಾಣಿ ಎಂಬುದನ್ನು ನಾವು ಮರೆಯಬಾರದು. ಹಂದಿಮನೆಯನ್ನು ಸರಿಯಾಗಿ ತೊಳೆಯದಿದ್ದರೆ ಅದು ಕೊಚ್ಚೆ ನೀರಲ್ಲೇ ಮಲಗುತ್ತದೆ. ನೈರ್ಮಲ್ಯ ಒದಗಿಸದೇ ಇರುವುದು ನಮ್ಮ ತಪ್ಪು ತಾನೇ ? ಅದು ಬಿಟ್ಟು ಹಂದಿ ಕೊಳಕು ಪ್ರಾಣಿ ಎಂದು ದೂರಬಾರದು! ಜಾಗ ವಿಶಾಲವಾಗಿದ್ದರೆ ಕೊಳಕನ್ನು ಬಿಟ್ಟು ನಿರ್ಮಲ ಜಾಗದಲ್ಲಿ ಹಂದಿ ಮಲಗುತ್ತದೆ.

ಈ ತಳಿಯ ಮಾಂಸದ ಇಳುವರಿ ಶೇಕಡಾ ಎಪ್ಪತ್ತರಿಂದ ಎಂಬತ್ತರಷ್ಟು ಮಾಂಸದ ಎಳೆಗಳ ಮಧ್ಯದಲ್ಲಿ ಕೊಬ್ಬಿನಂಶ ಕಡಮೆ. ಮಾಂಸದ ರುಚಿ ಹೆಚ್ಚು. ಚೆನ್ನಾಗಿ ಬೆಳೆದ ಹಂದಿ ಸುಮಾರು ಇನ್ನೂರೈವತ್ತು ಕೆ.ಜಿ ತೂಗುತ್ತದೆ. ಈ ತಳಿ ನಮ್ಮ ರಾಜ್ಯದ ಹವಾಗುಣಕ್ಕೆ, ಪರಿಸರಕ್ಕೆ, ಆಹಾರ ಪದ್ಧತಿಗಳಿಗೆ ಚೆನ್ನಾಗಿ ಹೊಂದಿಕೊಂಡು ಬೆಳೆಯುತ್ತದೆ. ಇದು ಕರ್ನಾಟಕದಲ್ಲಿ ಮೊದಲ ಸ್ಥಾನ ಹೊಂದಿರುವ ಅತ್ಯಂತ ಜನಪ್ರಿಯ ವಿದೇಶಿ ತಳಿ ಹಂದಿ.

ಮಿಡಲ್ ವೈಟ್ ಯಾರ್ಕ್‌ಶೈರ್

ಇದರ ಮೂಲ ಸಹ ಇಂಗ್ಲೆಂಡಿನ ಯಾರ್ಕ್ ಶೈರ್ ಪ್ರಾಂತ್ಯ. ಇದನ್ನು ಲಾರ್ಜ್ ವೈಟ್ ಮತ್ತು ಸ್ಮಾಲ್ ವೈಟ್ ತಳಿಗಳೊಂದಿಗೆ ಸಂಕರಣಗೊಳಿಸಿ ಅಭಿವೃದ್ಧಿಪಡಿಸಿದೆ. ಇದು ಮಧ್ಯಮ ಗಾತ್ರದ ಬಿಳಿ ಬಣ್ಣದ ಹಂದಿ. ಶೀಘ್ರವಾಗಿ ಬೆಳೆಯುತ್ತದೆ. ಅಗಲ ಹಣೆ, ನೆಟ್ಟಗಿರುವ ಕಿವಿ ಸ್ವಲ್ಪ ಮುಂದೆ ಬಾಗಿರುತ್ತದೆ. ಉತ್ತಮ ಮಾಂಸದ ತಳಿ. ಚೆನ್ನಾಗಿ ಬೆಳೆದ ಹಂದಿ ಸುಮಾರು ಇನ್ನೂರರಿಂದ ಇನ್ನೂರ ಮೂವತ್ತು ಕೆ.ಜಿ ತೂಗುತ್ತದೆ.

ಲ್ಯಾಂಡ್ ರೇಸ್

ಇದರ ಮೂಲ ಡೆನ್ಮಾರ್ಕ್, ಯಾರ್ಕ್‌ಶೈರ್‌ನಂತೆ ಇದೂ ಬಿಳುಪು ಬಣ್ಣ ಹೊಂದಿದೆ. ಎಲ್ಲ ಗುಣಗಳಲ್ಲೂ ಇದು ಯಾರ್ಕ್‌ಶೈರ್‌ನಂತೆಯೆ. ಆದರೆ ಕಿವಿಗಳು ಮಾತ್ರ ಅಗಲವಾಗಿದ್ದು ಮುಖದ ಮೇಲೆ ಮುಂದೆ ಬಾಗಿರುತ್ತದೆ. ಯಾರ್ಕ್‌ಶೈರ್‌ಗೂ ಇದಕ್ಕೂ ಇದೊಂದೇ ವ್ಯತ್ಯಾಸ. ಶರೀರ ಉದ್ದವಾಗಿರುತ್ತದೆ. ಭುಜ ಮತ್ತು ಹಿಂಗಾಲುಗಳ ಮೇಲ್ಭಾಗ ಮಾಂಸಖಂಡಗಳಿಂದ ತುಂಬಿಕೊಂಡಿರುತ್ತದೆ. ಶರೀರ ತೂಕ ಸಹ ಯಾರ್ಕ್‌ಶೈರ್‌ನಂತೆಯೇ ಇನ್ನೂರರಿಂದ ಇನ್ನೂರ ಮೂವತ್ತು ಕೆ.ಜಿ ತೂಗುತ್ತದೆ.

ಹ್ಯಾಂಶೈರ್

ಈ ತಳಿಯನ್ನು ಇಂಗ್ಲೆಂಡಿನಿಂದ ಅಮೆರಿಕಕ್ಕೆ ಆಮದು ಮಾಡಿಕೊಂಡು ಅಭಿವೃದ್ಧಿಪಡಿಸಿದೆ. ಮೈ ಬಣ್ಣ ಕಪ್ಪು. ಒಂದು ಬಿಳಿ ಪಟ್ಟಿ ಭುಜಗಳ ಮೇಲಿಂದ ಮುಂಗಾಲುಗಳನ್ನೂ ಸೇರಿಸಿಕೊಂಡಂತೆ ಹರಡಿರುತ್ತದೆ. ಈ ಹಂದಿಯನ್ನು ನೋಡುತ್ತಲೇ

ಇಂತಹ ಬಿಳಿಪಟ್ಟಿ ಗಮನಿಸಿ ಕೂಡಲೇ ಹ್ಯಾಂಶೈರ್ ತಳಿ ಎಂದು ಸುಲಭವಾಗಿ ಗುರುತಿಸಬಹುದು. ಕಿವಿಗಳು ನೇರ ನಿಂತಿರುತ್ತದೆ. ಹೆಚ್ಚು ಸಂಖ್ಯೆಯ ಮರಿಗಳನ್ನು ಈಯುತ್ತದೆ. ಉತ್ತಮ ತಾಯ್ತನ ಹೊಂದಿದೆ. ಉತ್ತಮ ಆಹಾರ ಪರಿವರ್ತನಾ ಸಾಮರ್ಥ್ಯ ಹೊಂದಿದೆ. ಚೆನ್ನಾಗಿ ಬೆಳೆದ ಈ ತಳಿ ಹಂದಿ ಸುಮಾರು ಇನ್ನೂರೈವತ್ತು ಕೆ.ಜಿ ತೂಗುತ್ತದೆ.

ವೆಸೆಕ್ಸ್ ಸ್ಯಾಡಲ್ ಬ್ಯಾಕ್

ಇಂಗ್ಲೆಂಡ್ ದೇಶದ ಉತ್ತಮ ಬೇಕನ್ ತಳಿ. ಮೈ ಬಣ್ಣ ಕಪ್ಪು. ಅಗಲ ಬಿಳಿಪಟ್ಟಿ ಬೆನ್ನಿನ ಮಧ್ಯಭಾಗದಿಂದ ಎರಡೂ ಕಡೆಗಳಲ್ಲಿ ಕಾಲಿನವರೆಗೆ ಹರಡಿರುತ್ತದೆ. ಹ್ಯಾಂಶೈರಿಗಿಂತ ಹೆಚ್ಚು ಅಗಲದ ಬಿಳಿಪಟ್ಟಿ ಹೊಂದಿರುತ್ತದೆ. ಶಕ್ತಿಯುತ ಕಾಲುಗಳನ್ನು ಹೊಂದಿದ್ದು ಬೆನ್ನು ಸ್ವಲ್ಪ ಬಾಗಿರುತ್ತದೆ.

ಬರ್ಕ್‌ಶೈರ್

ಇಂಗ್ಲೆಂಡಿನ ಪುರಾತನ ತಳಿ. ಉತ್ತಮ ದರ್ಜೆಯ ಮಾಂಸ ಪಡೆಯಬಹುದು. ಮೈ ಬಣ್ಣ ಕಪ್ಪು. ತಲೆ ಕಾಲು ಮತ್ತು ಬಾಲದ ಮೇಲೆ ಬಿಳಿ ಮಚ್ಚೆಗಳಿರುತ್ತದೆ. ಶರೀರ ನೀಳವಾಗಿದ್ದು, ಅಗಲವಾದ ಪಕ್ಕೆಗಳನ್ನು ಹೊಂದಿರುತ್ತದೆ. ಮಿಶ್ರತಳಿ ಅಭಿವೃದ್ಧಿಗೂ ಇದನ್ನು ಬಳಸಬಹುದು. ಚೆನ್ನಾಗಿ ಬೆಳೆದ ಹಂದಿ ಸುಮಾರು ಇನ್ನೂರೈವತ್ತು ಕೆ.ಜಿ ತೂಗುತ್ತದೆ.

ಟಾಂವರ್ತ್

ಇಂಗ್ಲೆಂಡಿನ ಅತಿ ಪುರಾತನ ದೇಶಿ ತಳಿ. ಮೈ ಬಣ್ಣ ಕೆಂಪು ಮಿಶ್ರಿತ ಕಂದು. ಉದ್ದ ಮತ್ತು ನೇರವಾದ ಮುಸುಡಿ ಹೊಂದಿರುತ್ತದೆ. ಅಗಲವಾದ ಕಿವಿಗಳು ಮುಂದೆ ಬಾಗಿರುತ್ತವೆ. ಭುಜಗಳು ಚಿಕ್ಕದಾಗಿದ್ದರೂ ಅಗಲವಾದ ಮತ್ತು ಗಟ್ಟಿಯಾದ ಬೆನ್ನು

ಹೊಂದಿರುತ್ತದೆ. ಇದನ್ನು ಉತ್ತಮ ಬೇಕನ್ ತಳಿ ಎಂದು ಹೇಳಬಹುದು. ಚೆನ್ನಾಗಿ ಬೆಳೆದ ಹಂದಿ ಸುಮಾರು ಇನ್ನೂರ ಮುವತ್ತು ಕೆ.ಜಿ ತೂಗುತ್ತದೆ.

ಪೋಲೆಂಡ್ ಚೈನಾ

ರಷ್ಯಾದ 'ವೈಟ್ ಬೈಫೀಲ್ಡ್' ಮತ್ತು ಚೀನಾದ 'ವೈಟ್ ಬಿಗ್ ಚೀನಾ' ತಳಿ ಹಂದಿಗಳನ್ನು ಅಮೆರಿಕಾದ ದೇಶೀಯ ಹಂದಿಗಳೊಂದಿಗೆ ಸಂಕರಣ ಮಾಡಲಾಯಿತು. ಇದರಿಂದ ಜನಿಸಿದ ಹಂದಿಗಳನ್ನು 'ವಾರನ್ ಕಂಟ್ರಿ' ಎಂದು ಕರೆದರು.

ಇದನ್ನು ಪುನ: 'ಬರ್ಕ್‌ಶೈರ್' ಹಂದಿಗಳೊಂದಿಗೆ ಸಂಕರಣ ಮಾಡಿದರು. ಇದರಿಂದ ಜನಿಸಿದ ತಳಿಯನ್ನು'ಪೋಲೆಂಡ್ ಚೈನ' ಎಂದು ಹೆಸರಿಸಿದರು. ಈ ತಳಿಯ ಅಭಿವೃದ್ಧಿ ಕಾರ್ಯ ಅಮೆರಿಕಾದಲ್ಲಿ ನಡೆಸಲಾಯಿತು.

ನೀಳ ಶರೀರ, ದಪ್ಪತಲೆ, ಮುಂದೆ ಬಾಗಿರುವ ಕಿವಿಗಳು ಈ ತಳಿಯ ಲಕ್ಷಣಗಳು. ಮೈ ಬಣ್ಣ ಕಪ್ಪು. ಕೆಲವು ಹಂದಿಗಳಲ್ಲಿ ಮೈಮೇಲೆ ಬಿಳಿ ಮಚ್ಚೆಗಳೂ ಇರುತ್ತವೆ. ಇದು ಸಹಾ ಉತ್ತಮ ಮಾಂಸದ ತಳಿ. ಚೆನ್ನಾಗಿ ಬೆಳೆದ ಹಂದಿ ಸುಮಾರು ಮುನ್ನೂರು ಕೆ.ಜಿ ತೂಗುತ್ತದೆ.

ಡ್ಯುರಾಕ್

ಇದರ ಮೂಲಸ್ಥಳ ಅಮೆರಿಕಾ. ನಂತರ ಇದನ್ನು ಡೆನ್ಮಾರ್ಕಿನಲ್ಲಿ ಅಭಿವೃದ್ಧಿ ಪಡಿಸಲಾಯಿತು. ಮೈ ಬಣ್ಣ ಕೆಂಪಗಿದ್ದು, ಮೈಮೇಲೆ ಕಪ್ಪುಮಿಶ್ರಿತ ಕೆಂಪು ಮತ್ತು ಕಂದು ಬಣ್ಣದ ಅಗಲ ಮಚ್ಚೆಗಳಿರುತ್ತವೆ. ಶರೀರದ ಗಾತ್ರ ತುಂಬ ದೊಡ್ಡದು. ಹೆಚ್ಚು ಸಂಖ್ಯೆಯ ಮರಿಗಳನ್ನು ಈಯುತ್ತದೆ. ಉತ್ತಮ ತಾಯಿಗುಣ ಹೊಂದಿದೆ. ರುಚಿಕರ ಮಾಂಸ ದೊರೆಯುತ್ತದೆ. ಇದನ್ನು ಹೆಚ್ಚಾಗಿ ಮಿಶ್ರತಳಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ

ಉಪಯೋಗಿಸಬಹುದು. ಚೆನ್ನಾಗಿ ಬೆಳೆದ ಹಂದಿ ಸುಮಾರು ಇನ್ನೂರ ಎಪ್ಪತ್ತು ಕೆ.ಜಿ ತೂಗುತ್ತದೆ.

ವಸತಿ

ಹಂದಿಗಳ ವಸತಿಯನ್ನು ನಿರ್ಮಿಸುವಾಗ ಹಲವಾರು ಅಂಶಗಳನ್ನು ರೈತ ನೆನಪಿಡಬೇಕು. ರೈತನ ಆರ್ಥಿಕ ಸ್ಥಿತಿ, ಹಂದಿಸಾಕಣೆಕೆಗೆ ದೊರೆಯುವ ಸ್ಥಳ, ಸಾಲ, ಹವಾಮಾನ, ಪರಿಸರ ಇವೆಲ್ಲ ಮುಖ್ಯ. ಬೇರೆಲ್ಲ ಪ್ರಾಣಿಗಳಿಗಿಂತಲೂ ಹಂದಿ ಅತ್ಯಂತ ಶೀಘ್ರವಾಗಿ ಬೆಳೆಯುವ ಪ್ರಾಣಿ ಎಂಬುದು ನೆನಪಿಡಬೇಕು. ಅದಕ್ಕೆ ತಕ್ಕಂತೆ ಹಂದಿ ಮನೆಯನ್ನು ಕಟ್ಟಿಸಬೇಕು.

ಮೊದಲಿಗೆ ಹಂದಿ ಮನೆ ನಿರ್ಮಿಸಲು ಬೇಕಾದ ಜಾಗದ ಆಯ್ಕೆಯನ್ನು ಸರಿಯಾಗಿ ಮಾಡಬೇಕು. ಅಲ್ಲಿಗೆ ರಸ್ತೆ, ವಿದ್ಯುತ್, ನೀರಿನ ಸಂಪರ್ಕಗಳು ಸರಿಯಾಗಿರಬೇಕು. ಹಂದಿ ಮನೆಯನ್ನು ಊರಾಚೆ ನಿರ್ಮಿಸುವುದು ಕ್ಷೇಮ, ಜನ ವಾಸಿಸುವ ಸ್ಥಳಗಳಲ್ಲಿ ಹಂದಿ ಸಾಕಲು ಪ್ರಾರಂಭಿಸಿದರೆ ಜನ ಆಕ್ಷೇಪಣೆ ಮಾಡಬಹುದು.

ಹಂದಿಮನೆಗೆ ನೀರಿನ ಸರಬರಾಜು ಅತ್ಯಗತ್ಯ. ಒಂದು ದಿನ ಮನೆ ತೊಳೆಯದಿದ್ದರೆ ಮಲ, ಮೂತ್ರ ಬೆರೆತು ಕೆಟ್ಟ ವಾಸನೆ ಬರುತ್ತದೆ. ನಂತರ ಅದು ರೋಗ, ರುಜಿನಗಳ ಸ್ಥಾನವೂ ಆಗಬಹುದು. ಆದ್ದರಿಂದ ದಿನಕ್ಕೆರಡು ಬಾರಿ ಚೆನ್ನಾಗಿ ತೊಳೆದು ನಂತರ ಫಿನೈಲ್ ದ್ರಾವಣವನ್ನು ಸಿಂಪಡಿಸಬೇಕು. ಇದರಿಂದ ರೋಗಕಾರಕ ಕ್ರಿಮಿಗಳನ್ನು ನಾಶಪಡಿಸಬಹುದು.

ರೈತನಿಗೆ ಸಾಕಷ್ಟು ಜಮೀನಿದ್ದರೆ ಹಂದಿಮನೆ ತೊಳೆದ ನೀರು ನೇರವಾಗಿ ಕಾಲುವೆಯ ಮೂಲಕ ಜಮೀನಿಗೆ ಹರಿಯಲು ಬಿಡಬೇಕು. ಹಣದ ಖರ್ಚಿಲ್ಲದೆ, ಕೆಲಸಗಾರರ ಶ್ರಮವಿಲ್ಲದೆ ಜಮೀನಿಗೆ ಉತ್ತಮ ಗೊಬ್ಬರ ದೊರೆಯುತ್ತದೆ.

ಪ್ರತಿಯೊಂದು ಹಂದಿಮನೆಗೂ ಸಾಕಷ್ಟು ಗಾಳಿ, ಬೆಳಕು ಬರುವಂತಿರಬೇಕು. ಹಂದಿ ಮನೆಗಳನ್ನು ಪೂರ್ವ, ಪಶ್ಚಿಮ ದಿಕ್ಕಿನಲ್ಲಿ ಕಟ್ಟಬೇಕು. ಉರಿ ಬಿಸಿಲು ಆಗ ಹಂದಿಗಳ ಮೇಲೆ ನೇರವಾಗಿ ಬೀಳುವುದಿಲ್ಲ. ಹಂದಿಮನೆ ಸಾಧ್ಯವಾದಷ್ಟು ಎತ್ತರದ ಸ್ಥಳದಲ್ಲಿರಬೇಕು.

ಸ್ಥಳೀಯವಾಗಿ ದೊರೆಯುವ ಮರ, ಬೊಂಬು, ಹಳೆತಗಡಿನ ಶೀಟು, ತೆಂಗಿನ ಚಾಪೆ, ಹೆಂಚು ಮುಂತಾದವನ್ನು ಉಪಯಯೋಗಿಸಿದರೆ ಹಂದಿಮನೆ ಕಟ್ಟಲು ಖರ್ಚು ಜಾಸ್ತಿ ಬರುವುದಿಲ್ಲ. ಈ ರೀತಿ ಕಟ್ಟಿದರೂ ಚದುರಡಿಗೆ ಸುಮಾರು ನಲವತ್ತು ರೂಪಾಯಿ ವೆಚ್ಚಬರಬಹುದು. ಛಾವಣಿಯ ಎತ್ತರ ಹತ್ತು ಅಡಿಗಳಿದ್ದರೆ ಬೇಸಿಗೆಯಲ್ಲಿ ಹಂದಿಗಳಿಗೆ ಬಿಸಿಲಿನ ತಾಪ ತಟ್ಟುವುದಿಲ್ಲ. ಹಂದಿ ಮನೆಯನ್ನು ತೋಟ ಇಲ್ಲವೇ ಮರಗಳ ತೋಪಿನಲ್ಲಿಕಟ್ಟಿದರೆ ತಂಪಾದ ಗಾಳಿ ಹಂದಿಗಳಿಗೆ ದೊರೆಯುತ್ತದೆ. ಹಂದಿಗಳಿಗೂ ಹಿತಕರವಾಗಿರುತ್ತದೆ.

ನಿರ್ಮಾಣಕ್ಕೆ ಕೈಹಾಕುವ ಮೊದಲು ಸಮೀಪದ ಪಶುವೈದ್ಯರೊಡನೆ ಸಮಾಲೋಚಿಸಬೇಕು. ಅವರ ಸಲಹೆಯಂತೆ ಹಂದಿಮನೆ ನಿರ್ಮಿಸಬೇಕು. ಅನುಭವದ ಮೇಲೆ ಪಶುವೈದ್ಯರು ರೈತನಿಗೆ ಅಗತ್ಯವಾದ ಸಲಹೆ ನೀಡುತ್ತಾರೆ. ಅದು ಬಿಟ್ಟು ಮೊದಲು ತನಗೆ ಅನ್ನಿಸಿದಂತೆ ಕಟ್ಟಿದರೆ ನಂತರ ರಿಪೇರಿಗೆ, ಮಾರ್ಪಾಟಿಗೆ ಹೆಚ್ಚಿನ ಹಣ ರೈತ ಖರ್ಚು ಮಾಡಬೇಕಾಗುತ್ತದೆ.

ನಂತರ ರೈತನಿಗೆ ಎಷ್ಟು ಹಂದಿಗಳನ್ನು ಸಾಕುವ ಸಾಮರ್ಥ್ಯವಿದೆ ಎಂಬುದನ್ನು ನಿರ್ಧರಿಸಬೇಕು. ತಂದಾಗ ಹತ್ತಾರು ಸಂಖ್ಯೆಯ ಹಂದಿಗಳು ಒಂದೆರಡು ವರ್ಷಗಳಲ್ಲಿ ನೂರಾರಾಗುತ್ತವೆ. ಆದ್ದರಿಂದ ಅದಕ್ಕೆ ತಕ್ಕಷ್ಟು ವಸತಿಯ ವ್ಯವಸ್ಥೆಯನ್ನು ಮೊದಲೇ ಆಲೋಚಿಸಬೇಕಾಗುತ್ತದೆ. ಹಂದಿಮನೆಯ ನೆಲಕ್ಕೆ ಒರಟಾದ ಹಾಸುಗಲ್ಲು ಹಾಕಿದರೆ ಉತ್ತಮ. ಆಗ ಹಂದಿಗಳು ಜಾರುವುದಿಲ್ಲ. ಜಾರಿ ಬಿದ್ದರೆ ಸೊಂಟದ ಮೂಳೆ ಮುರಿಯಬಹುದು. ಗಾರೆಯಿಂದ ನೆಲ ನಿರ್ಮಿಸಿದರೆ ನೆಲ ಬೇಗನೆ ಹಾಳಾಗುತ್ತದೆ.

ಹಂದಿಗಳಿಗೆ ಬಹಳ ಬಲವಾದ ಮುಸುಡಿ ಮತ್ತು ದವಡೆಗಳಿವೆ. ಆದ್ದರಿಂದ ಬಲಹೀನ ಸಾಮಾನ್ಯ ಕಟ್ಟಡ ಅಥವಾ ಗೋಡೆಗಳನ್ನು ಬೀಳಿಸಿ ಹಾಳು ಮಾಡುತ್ತವೆ. ಪ್ರತಿ ಮನೆಯಲ್ಲೂ ಆಹಾರಕ್ಕೆ, ನೀರಿಗೆ, ಮಲಗಲು, ಓಡಾಡಲು ಸಾಕಷ್ಟು ಸ್ಥಳಾವಕಾಶ

ಒದಗಿಸಬೇಕು. ವಾತಾವರಣದಲ್ಲಿ ಉಂಟಾಗುವ ಬದಲಾವಣೆಗಳು ವಿದೇಶಿ ಹಾಗೂ ಮಿಶ್ರತಳಿ ಹಂದಿಗಳ ಮೇಲೆ ಕೆಟ್ಟ ಪರಿಣಾಮ ಉಂಟು ಮಾಡುತ್ತವೆ. ಶೀತವಾಗಿ ಮರಿಗಳು ಸಾಯಬಹುದು. ತಾಯಿಯಡಿ ಸಿಕ್ಕಿ ಅಪ್ಪಚ್ಚಿಯಾಗಿ ಮರಿ ಸಾಯಬಹುದು. ಅಧಿಕ ಶಾಖ ಹಂದಿಯ ಉತ್ಪಾದನಾ ಸಾಮರ್ಥ್ಯವನ್ನು ಕುಗ್ಗಿಸಬಹುದು. ಇವೆಲ್ಲ ತೊಂದರೆಗಳನ್ನು ಉತ್ತಮ ವಸತಿಯಿಂದ ನಿವಾರಣೆ ಮಾಡಬಹುದು.

ಹೆಚ್ಚಿನ ಸ್ಥಳಾವಕಾಶವಿದ್ದರೆ ವಸತಿಯಲ್ಲಿ ಏಳಡಿ ಐದಡಿ ವಿಸ್ತೀರ್ಣದ ಕಲ್ಲು ಚಪ್ಪಡಿಯ ನೀರಿನ ತೊಟ್ಟಿ ಕಟ್ಟಿಸಬೇಕು. ಹಂದಿ ತನಗೆ ಇಷ್ಟ ಬಂದಾಗ ಹೋಗಿ ತೊಟ್ಟಿಯಲ್ಲಿ ಮಲಗುತ್ತದೆ. ಹಂದಿಗೆ ನೀರು ಎಂದರೆ ಇಷ್ಟ. ಆ ಎಮ್ಮೆಯಂತೆ ಅದೂ ನೀರಿನಲ್ಲಿರಲು ಬಯಸುತ್ತದೆ!

ಹುಟ್ಟಿದ ಮರಿಗಳು ಸಾಯದಂತೆ ಹಂದಿ ಮನೆಯ ನೆಲದಲ್ಲಿ ಗೋಡೆಯಿಂದ ಆರು ಅಂಗುಲ ಬಿಟ್ಟು ಹಾಗೂ ನೆಲದಿಂದ ಆರು ಅಂಗುಲ ಎತ್ತರದಲ್ಲಿ ಎರಡೂವರೆ ಅಂಗುಲ ಅಗಲದ ಏಳು ಅಡಿ ಉದ್ದದ ಕಬ್ಬಿಣದ ಪೈಪನ್ನು ಹೂಳಬೇಕು. ತಾಯಿ ಹಂದಿ ನಿರ್ಲಕ್ಷ್ಯದಿಂದ ಮಲಗಿದಾಗ, ಅದರ ಭಾರ ಕಬ್ಬಿಣದ ಪೈಪಿನ ಮೇಲೆ ಬೀಳುತ್ತದೆ. ಮರಿಗಳು ತಾಯಿ ಹಂದಿಯ ಅಡಿಗೆ ಸಿಕ್ಕಿ ಸಾಯುವುದಿಲ್ಲ. ಈ ರೀತಿಯ ಪೈಪುಗಳನ್ನು ಹಂದಿಗಳ ಹೆರಿಗೆ ಮನೆಯಲ್ಲಿ ಹೂಳಿಸಬೇಕು.

ಹಂದಿ ಮನೆಗಳನ್ನು ಕಟ್ಟಿಸುವಾಗ ಹೆರಿಗೆಮನೆ, ಸಂಕರಣ (ಕ್ರಾಸ್ ಮಾಡಿಸಲು)ಕ್ಕೆ, ಸಲಗಕ್ಕೆ, ಗರ್ಭಿಣಿ ಹಂದಿಗಳಿಗೆ, ಬೆಳೆಯುವ ಮರಿಗಳಿಗೆ ಪ್ರತ್ಯೇಕ ಜಾಗ ಒದಗಿಸಬೇಕು. ಹೆರಿಗೆ ಮನೆ ಏಳು ಅಡಿ ಉದ್ದ ಐದು ಅಡಿ ಅಗಲ ಹಾಗೂ ಒಳಗಿನ ಗೋಡೆ ಐದು ಅಡಿ ಎತ್ತರವಿರಬೇಕು. ಇಷ್ಟು ಜಾಗ ಒಂದು ಹಂದಿ ಮತ್ತು ಎಂಟು ಹತ್ತು ಮರಿಗಳಿಗೆ ಸಾಕು.

ಸಲಗಕ್ಕೆ, ಪ್ರತ್ಯೇಕ ವಸತಿ ಬೇಕು. ಇದಕ್ಕೂ ಸಹ ಮೇಲೆ ತಿಳಿಸಿದಷ್ಟೇ ಜಾಗ ಸಾಕು. ಏಳು ಅಡಿ ಉದ್ದ ಹನ್ನೆರಡು ಅಡಿ ಅಗಲದ ಮನೆಗಳಲ್ಲಿ ನಾಲ್ಕೈದು ಗರ್ಭದ ಹಂದಿಗಳಿಗೆ ಸ್ಥಳ ಸಾಕಾಗುತ್ತದೆ. ಇದನ್ನು ಹೆರಿಗೆ ಸಮೀಪಿಸಿದಂತೆ ಹೆರಿಗೆ ಮನೆಗೆ

ಬದಲಾಯಿಸಬೇಕು. ಗಂಡಿನೊಂದಿಗೆ ಅಥವಾ ಇತರೆ ಹಂದಿಗಳೊಡನೆ ಇದ್ದರೆ ಕಚ್ಚಾಡಿ ಗರ್ಭಪಾತವಾಗಬಹುದು.

ಬೆಳೆಯುವ ಮರಿಗಳಿಗೆ ಏಳು ಅಡಿ ಉದ್ದ ಹದಿನೈದು ಅಡಿ ಅಗಲ ಇದ್ದರೆ ಸುಮಾರು ಎರಡು ಮೂರು ತಿಂಗಳ ಮೂವತ್ತು ನಲವತ್ತು ಹಂದಿಮರಿಗಳಿಗೆ ಸ್ಥಳವಾಗುತ್ತದೆ. ಇಂತಹದೇ ಮತ್ತೊಂದು ಮನೆಯಲ್ಲಿ ಎಂಟು ಹತ್ತು ಹೆಣ್ಣು ಹಂದಿ ಒಂದು ಸಲಗವನ್ನು ಸಂಕರಣಕ್ಕೆ (ಕ್ರಾಸ್ ಮಾಡಿಸಲು) ಬಿಡಬಹುದು. ಪ್ರತಿಯೊಂದು ಮನೆಗೂ ನೀರು ಮತ್ತು ಆಹಾರದ ತೊಟ್ಟಿಯನ್ನು ಒಂದೇ ಬದಿಯಲ್ಲಿ ನಿರ್ಮಿಸಬೇಕು. ಆಗ ಆಹಾರ, ನೀರು ಒದಗಿಸುವುದು ಸುಲಭವಾಗುತ್ತದೆ.

ಒಟ್ಟಿನಲ್ಲಿ, ಯಾವುದೇ ಬಗೆಯ ಹಂದಿ ಮನೆ ಕಟ್ಟಿಸುವ ಮೊದಲು ಪಶುವೈದ್ಯರ ಸಲಹೆ ಪಡೆಯಬೇಕು. ಸಮೀಪದ ಯಾವುದಾದರೂ ಮೂರು ನಾಲ್ಕು ಹಂದಿ ಫಾರಂಗಳಿಗೆ ಭೇಟಿಕೊಟ್ಟು, ಅಲ್ಲಿಯ ವ್ಯವಸ್ಥೆಗಳನ್ನು ಮನಸ್ಸಿಟ್ಟು ಗಮನಿಸಬೇಕು. ಇದರಿಂದ ರೈತನಿಗೆ ತನಗೆ ಬೇಕಾಗುವ ಹಂದಿ ಮನೆಯ ಸ್ಪಷ್ಟ ಚಿತ್ರ, ಅಭಿಪ್ರಾಯ ದೊರೆಯುತ್ತದೆ.

ಆಹಾರ

ಯಾರಾದರೂ ಹೆಚ್ಚು ಪ್ರಮಾಣದಲ್ಲಿ ಆಹಾರ ತಿನ್ನುತ್ತಿದ್ದರೆ ಅವರನ್ನು ತಮಾಷೆಗೆ ಹಂದಿಗೆ ಹೋಲಿಸುತ್ತೇವೆ! ಅಲ್ಲವೇ? ನಿಜ. ಹಂದಿಯನ್ನು ಸದಾಕಾಲ ಬಾಯಾಡಿಸಲು ಇಷ್ಟಪಡುವ ಸರ್ವಭಕ್ಷಕ ಪ್ರಾಣಿ ಎಂದು ಕರೆಯಬಹುದು. ಅದು ತಿನ್ನದ ಆಹಾರವಿಲ್ಲ. ಹಂದಿ ಸಾಕುವವರು ಹಂದಿಯ ಆಹಾರದ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಹಂದಿಸಾಕಣೆಯಲ್ಲಿ ಪ್ರತಿ ತಿಂಗಳೂ ಬರುವ ವೆಚ್ಚದಲ್ಲಿ ಶೇ ಐವತ್ತರಿಂದ ಅರವತ್ತು ಭಾಗ ಹಂದಿಯ ಆಹಾರಕ್ಕೇ ಬೇಕಾಗುತ್ತದೆ.

ಆಹಾರದ ಖರ್ಚನ್ನು ಕಡಮೆ ಮಾಡುವುದು ಹೇಗೆ? ಅದಕ್ಕೆ ದಾರಿಯಿದೆ. ಹಂದಿ ಇದೇ ಬೇಕು ಅದೇ ಬೇಕು ಎಂದು ಕೇಳುವುದಿಲ್ಲ. ಅಪರೂಪಕ್ಕೆ ಒಮ್ಮೊಮ್ಮೆ ತಾನು

ಹಡೆದ ಮರಿಗಳನ್ನೇ ತಿಂದು ಬಿಡುತ್ತದೆ! ಮಾರುಕಟ್ಟೆಯ ಉಳಿಕೆ ತರಕಾರಿ, ಹಣ್ಣಿನ ಸಿಪ್ಪೆ, ಹಾಸ್ಟೆಲ್, ಹೋಟಲ್ ಮುಂತಾದ ಕಡೆ ದೊರೆಯುವ ಉಳಿಕೆ ಆಹಾರಗಳನ್ನು ಕೊಡಬಹುದು. ಕೋಳಿ ಫಾರಂಗಳಲ್ಲಿ ಮರಿಯಾಗದ ಮೊಟ್ಟೆಗಳು ಸಹ ಹಂದಿಗೆ ಆಹಾರವೇ. ಹಳ್ಳಿಗಳಲ್ಲಿ ರೈತರಿಗೆ ಇಂತಹ ಆಹಾರ ಸಿಗುವುದು ಅಪರೂಪ, ಬಹಳ ಕಷ್ಟ. ಆಗ ಕಲಗಚ್ಚು, ನೀರು, ತರಕಾರಿ ಸಿಪ್ಪೆ, ಉಳಿದ ಕಾಯಿಪಲ್ಲೆ, ಮುಸರೆ, ಎಸರು ಇವನ್ನು ಹಂದಿಗೆ ಆಹಾರವಾಗಿ ಕೊಡಬಹುದು. ಇದನ್ನು ಪೌಷ್ಠಿಕ ಆಹಾರ ಎಂದು ಕರೆಯಲಾಗುವುದಿಲ್ಲ.

ಹಂದಿಗಳಿಗೆ ಮನುಷ್ಯರಂತೆ ಒಂದೇ ಹೊಟ್ಟೆ ಇದೆ. ಹಸು, ಎಮ್ಮೆ, ಕುರಿ, ಮೇಕೆಗಳಂತೆ ಹಂದಿಗೆ ಹೊಟ್ಟೆಯಲ್ಲಿ ನಾಲ್ಕು ವಿಭಾಗಗಳಿರುವುದಿಲ್ಲ. ಇದು ಮೆಲುಕು ಹಾಕುವ ಪ್ರಾಣಿಯೂ ಅಲ್ಲ. ಆದ್ದರಿಂದ ಹಂದಿಗಳು ಹೆಚ್ಚು ನಾರಿನಂಶವಿರುವ ಆಹಾರವನ್ನು ತಿಂದು ಜೀರ್ಣಿಸಿಕೊಳ್ಳುವ ಶಕ್ತಿ ಪಡೆದಿಲ್ಲ. ಮನುಷ್ಯರಂತೆ ಇದಕ್ಕೆ ಸಸ್ಯಜನ್ಯ ಮತ್ತು ಪ್ರಾಣಿಜನ್ಯದಿಂದ ಬರುವ ಆಹಾರವೇ ಸರಿ.

ಹಂದಿಗಳಿಗೆ ಕೊಡುವ ಆಹಾರವನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ೧. ಸ್ಥೂಲ ಆಹಾರ ೨. ಉತ್ಪಾದನಾ ಆಹಾರ.

ಸ್ಥೂಲ ಆಹಾರವು ಶರೀರದ ದೈನಂದಿನ ಚಟುವಟಿಕೆಗಳಿಗೆ ಹಾಗೂ ಜೈವಿಕ ರಸಾಯನ ಕ್ರಿಯೆಗಳಿಗೆ ಅತಿ ಮುಖ್ಯ. ಜೋಳದ ಕಡ್ಡಿ, ಕಾಳುಗಳು, ಕಟಾವಿನ ನಂತರ ಬರುವ ಚಿಗುರು ಮೇವು, ಗೆಡ್ಡೆಗೆಣಸು, ಕತ್ತಾಳೆಗಡ್ಡೆ, ಕಬ್ಬಿನ ಸೊಂಡೆ, ಹುಣಸೇ ಬೀಜ, ಅಕ್ಕಿ ಮತ್ತು ಗೋಧಿಯ ತೌಡು, ಇತ್ಯಾದಿ. ಈ ರೀತಿಯ ಆಹಾರವನ್ನು ಹಂದಿ ಸುಲಭವಾಗಿ ಜೀರ್ಣಿಸಿಕೊಳ್ಳುತ್ತದೆ. ಹಂದಿಗೆ ಅಜೀರ್ಣ ಅಪರೂಪ! ಇಲ್ಲವೇ ಇಲ್ಲ ಎಂದೂ ಹೇಳಬಹುದು! ಹೆಚ್ಚಿನ ಉತ್ಪಾದನೆಗೆ ಬೇಕಾದ ಸಮತೋಲನ ಆಹಾರವನ್ನು ನಿಗದಿತ ಪ್ರಮಾಣದಲ್ಲಿ ದಿನಕ್ಕೆ ಎರಡುಬಾರಿ ಕೊಡಬೇಕು.

ಉತ್ಪಾದನಾ ಆಹಾರವನ್ನು ಸಮತೋಲನ ಆಹಾರವೆಂದೂ ಕರೆಯಬಹುದು. ಇದರಲ್ಲಿ ನಾರಿನಂಶ ಶೇಕಡ ಆರಕ್ಕಿಂತ ಕಡಮೆ ಇರುತ್ತದೆ. ಸಸಾರಜನಕದ ಅಂಶ ಶೇಕಡ ಹದಿನಾರರಿಂದ ಇಪ್ಪತ್ತೆರಡು ಇರುತ್ತದೆ. ಈ ಆಹಾರ ಹೆಚ್ಚು ಶಕ್ತಿಯುತವಾಗಿ ಹಾಗೂ

ಹಂದಿಗೆ ರುಚಿಕರವಾಗಿರುತ್ತದೆ. ಸಮತೋಲನ ಆಹಾರ ತಯಾರಿಸಲು ಬೇಕಾಗುವ ಒಂದು ಪಟ್ಟಿಯನ್ನೇ ಮಾಡಬಹುದು: ಮೆಕ್ಕೆಜೋಳ, ಗೋಧಿ, ಸಜ್ಜೆ, ನವಣೆ, ರಾಗಿ, ಅಕ್ಕಿತೌಡು, ಗೋಧಿ ತೌಡು, ದ್ವಿದಳ ಧಾನ್ಯಗಳ ನುಚ್ಚು, ಕಡಲೆಹೊಟ್ಟು, ಅಲಸಂದೆ, ಹೆಸರು, ಉದ್ದು, ಹುರಳಿ, ಸೋಯ ಅವರೆಯ ಹೊಟ್ಟು, ಕಡಲೇಕಾಯಿ ಹಿಂಡಿ, ಸೋಯ ಅವರೆ ಹಿಂಡಿ, ಹತ್ತಿಕಾಳು ಹಿಂಡಿ, ಕುದುರೆ ಮಸಾಲೆ ಅಥವಾ ಅಗಸೇ ಸೊಪ್ಪಿನ ಪುಡಿ, ಮೀನಿನ ಪುಡಿ, ಮೂಳೆಪುಡಿ ಇವೆಲ್ಲಾ ಜೀವಸತ್ವಗಳನ್ನೂ, ಖನಿಜಾಂಶಗಳನ್ನು ಒದಗಿಸುತ್ತವೆ.

ಆಯಾ ಬೆಳೆಗಳ ಕಾಲಕ್ಕೆ ತಕ್ಕಂತೆ ಬೆಲೆ ಕಡಿಮೆ ಇರುವಾಗ ಕೊಳ್ಳುವುದು ಒಳ್ಳೆಯದು. ಮಿತವ್ಯಯ ಸಾಧಿಸಬಹುದು. ಬೆಲೆಗೆ ತಕ್ಕಂತೆ ರೈತನಿಗೆ ಹೊರೆಯಾಗದ ಹಾಗೆ ಶೇಕಡಾವಾರು ಪ್ರಮಾಣವನ್ನು ಸ್ವಲ್ಪಮಟ್ಟಿಗೆ ಹೆಚ್ಚುಕಡಿಮೆ ಮಾಡಬಹುದು. ಸ್ಥಳೀಯವಾಗಿ ಸಿಗುವ ಆಹಾರ ಪದಾರ್ಥಗಳನ್ನು ಉಪಯೋಗಿಸಿಕೊಂಡು ಬುದ್ಧಿವಂತಿಕೆಯಿಂದ ಹಂದಿ ಸಾಕಬಹುದು.

ಈ ಮೇವಿನ ಮಿಶ್ರಣಗಳಿಗೆ ಸೂಕ್ಷ್ಮಜೀವಿ ನಿರೋಧಕ ಔಷಧಿಗಳನ್ನು ಪಶುವೈದ್ಯರ ಸಲಹೆ ಮೇರೆಗೆ ಬೆರೆಸುವುದು ಉತ್ತಮ. ಜೊತೆಗೆ ಕಬ್ಬಿಣದ ಅಂಶ ಹಾಗೂ ಜೀವಸತ್ವಗಳಾದ ಎ,ಡಿ,ಇ, ಅನ್ನಾಂಗಗಳನ್ನು ಸಮತೋಲನ ಆಹಾರದಲ್ಲಿ ತಪ್ಪದೇ ಬೆರೆಸಬೇಕು. ಆಗ ಲವಣಾಂಶ ಹಾಗೂ ಅನ್ನಾಂಗಗಳ ಕೊರತೆಯಿಂದ ಬರುವ ರೋಗಗಳನ್ನು ತಡೆಗಟ್ಟಬಹುದು.

ಹೀಗೆ ಸಮತೋಲನ ಆಹಾರವನ್ನು ದಿನಕ್ಕೆರಡು ಬಾರಿ ಭಾಗ ಮಾಡಿ ಕೊಡಬೇಕು. ಪ್ರತಿ ಮೂರು ಕಿಲೋ. ಸಮತೋಲನ ಆಹಾರವನ್ನು ಒಂದು ಕಿಲೋ ಮಾಂಸವಾಗಿ ಪರಿವರ್ತಿಸುವ ಸಾಮರ್ಥ್ಯ ಹಂದಿಗೆ ಇದೆ. ಇದನ್ನೇ ಆಹಾರ ಪರಿವರ್ತನಾ ಸಾಮರ್ಥ್ಯ ಎನ್ನುತ್ತಾರೆ. ಎಂಟು ತಿಂಗಳ ನಂತರ ಸಲಗಕ್ಕೆ ದಿನಕ್ಕೆ ಮೂರೂವರೆ ಕಿಲೋ, ಹೆಣ್ಣು ಹಂದಿಗೆ ಮೂರು ಕಿಲೋ ಸಮತೋಲನ ಆಹಾರವನ್ನು ಎರಡು ಭಾಗ ಮಾಡಿ ಬೆಳಿಗ್ಗೆ, ಸಂಜೆ ಕೊಡಬೇಕು.

ಸಿಗುವಂತಿದ್ದರೆ, ನೇಪಿಯರ್, ಸುಬಾಬುಲ್, ಪ್ಯಾರ ಹುಲ್ಲನ್ನು ದಿನಕ್ಕೆರಡು ಬಾರಿ ಕೊಡಬಹುದು. ಹಂದಿ ಹಸಿಹುಲ್ಲನ್ನು ತಿನ್ನುತ್ತದೆ ಎಂಬುದನ್ನು ಕಣ್ಣಾರೆ ಕಂಡ

ಹೊರತು ಯಾರೂ ನಂಬುವುದಿಲ್ಲ. ರಸಭರಿತ ಎಳೆ ಹಸಿಹುಲ್ಲನ್ನು ಹಂದಿ ಸಂತೋಷದಿಂದ ತಿನ್ನುತ್ತದೆ.!

ನೀರು

ಮನುಷ್ಯರಾಗಲಿ, ಪ್ರಾಣಿಗಳಾಗಲಿ ನೀರಿಲ್ಲದೆ ಬದುಕಲು ಸಾಧ್ಯವಿಲ್ಲ. ತಿಂದ ಆಹಾರವನ್ನು ನೆನೆಸಿ ಜೀರ್ಣಿಸುವಂತೆ ಮಾಡಲು ನೀರು ಬೇಕು. ಕುಡಿಯಲು ಮಾತ್ರವಲ್ಲ, ಹಂದಿಮನೆ ಹಾಗೂ ಹಂದಿಗಳನ್ನು ಪ್ರತಿದಿನ ತೊಳೆಯಲು ಬಹಳ ನೀರು ಬೇಕು.

ಹತ್ತು ಮರಿಗಳ ತಾಯಿಹಂದಿ ಸುಮಾರು ಎರಡು ತಿಂಗಳಲ್ಲಿ ಇನ್ನೂರೈವತ್ತು ಲೀಟರ್ ಹಾಲನ್ನು ಉತ್ಪಾದಿಸುತ್ತದೆ. ಒಂದು ಹಸು ಒಂದು ಲೀಟರ್ ಹಾಲು ಉತ್ಪಾದಿಸಲು ನಾಲ್ಕೈದು ಲೀಟರ್ ನೀರು ಕುಡಿಯಬೇಕು.

ಬೇಸಿಗೆಯಲ್ಲಿ ಹಂದಿಗಳು ತಮ್ಮ ಶರೀರದ ಉಷ್ಣತೆಯನ್ನು ಸಮತೋಲನದಲ್ಲಿಡಲು ಹೆಚ್ಚು ನೀರನ್ನು ಕುಡಿಯುತ್ತದೆ.

ಹವಾಮಾನ ಹಾಗೂ ದೇಹದ ಪ್ರಕೃತಿಗೆ ಅನುಗುಣವಾಗಿ ಈ ಪ್ರಮಾಣ ಹೆಚ್ಚು ಕಡಮೆಯಾಗಬಹುದು. ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸ್ವಚ್ಛ ನೀರನ್ನು ಒದಗಿಸುವುದು ಆಹಾರದಷ್ಟೇ ಮುಖ್ಯ.

ಸಂತಾನಾಭಿವೃದ್ಧಿ

ಹೆಣ್ಣು ಹಂದಿಯನ್ನು ಸಂತಾನಲಕ್ಷ್ಮಿ ಎಂದರೂ ತಪ್ಪಿಲ್ಲ! ಸಂತಾನವನ್ನು ವೃದ್ಧಿಸಲು ಉತ್ತಮ ಗಂಡು, ಹೆಣ್ಣು ಹಂದಿಗಳನ್ನು ಆಯ್ಕೆ ಮಾಡಬೇಕು. ಹೆಣ್ಣು ಹಂದಿ ಒಳ್ಳೆಯ ವಂಶಾವಳಿ ಹೊಂದಿರಬೇಕು. ಉತ್ತಮ ತಾಯಿಗುಣ, ಹೆಚ್ಚು ಹಾಲು ಉತ್ಪಾದಿಸುವುದು ಹಾಗೂ ಹೆಚ್ಚು ಮರಿಗಳನ್ನು ಹಾಕುವ ಹೆಣ್ಣು ಹಂದಿಯನ್ನು ಆಯ್ಕೆ ಮಾಡಬೇಕು. ಅದೇರೀತಿ ಸಲಗವನ್ನು ಆರಿಸುವಾಗ ಅದರ ವಂಶಾವಳಿಯನ್ನು ಗಮನಿಸಬೇಕು. ಅದು ಅನುವಂಶೀಯ ರೋಗಗಳಿಂದ ಮುಕ್ತವಿರಬೇಕು.

ಸಾಕುಪ್ರಾಣಿಗಳಲ್ಲಿ ಹಂದಿಗಳಷ್ಟು ಶೀಘ್ರಕಾಲದಲ್ಲಿ ಹೆಚ್ಚು ಮರಿಗಳನ್ನು ಹಾಕಿ ಹೆಚ್ಚು ಲಾಭ ಕೊಡುವ ಇನ್ನೊಂದು ಪ್ರಾಣಿ ಇಲ್ಲ. ಹೆಣ್ಣು ಹಂದಿ ಏಳೆಂಟು ತಿಂಗಳಿಗೆ



ಬೆದೆಗೆ ಬಂದಿರುವ ಹಂದಿ

ಪ್ರಾಯಕ್ಕೆ ಬರುತ್ತದೆ. ಉತ್ತಮ ಸಲಗದಿಂದ ಅದಕ್ಕೆ 'ಕ್ರಾಸ್' ಮಾಡಿಸಬೇಕು. ಆಗ ಅಧಿಕ ಸಂಖ್ಯೆಯ ಆರೋಗ್ಯವಂತ ಮರಿಗಳನ್ನು ಪಡೆಯಬಹುದು. ಸಂಕರಣ (ಕ್ರಾಸ್) ಮೊದಲು ಸಲಗಕ್ಕೆ ಕನಿಷ್ಠ ಒಂದು ವರ್ಷ ವಯಸ್ಸು, ಶರೀರ ತೂಕ ನೂರು ಕಿಲೋ ಇರಬೇಕು.

ಪ್ರಾಯಕ್ಕೆ ಬಂದ ಹೆಣ್ಣು ಪಡ್ಡೆ ಪ್ರತಿ ಹದಿನಾರರಿಂದ ಇಪ್ಪತ್ತು ದಿನಕ್ಕೊಂದು ಸಲ ಬೆದೆಗೆ ಬರುತ್ತದೆ. ಬೆದೆಯ ಲಕ್ಷಣಗಳು:

೧. ಬೆದೆಯಲ್ಲಿರುವ ಹೆಣ್ಣು ಹಂದಿ ಸುಮ್ಮನಿರದೆ ಹಿಂಡಿನಲ್ಲಿ ಒಂದು ರೀತಿ ಗುರುಗುರು ಸದ್ದು ಮಾಡುತ್ತಿರುತ್ತದೆ.

೨. ಬೇರೆ ಹಂದಿ ತನ್ನ ಮೇಲೆ ಹತ್ತಿದರೂ ಸುಮ್ಮನಿರುತ್ತದೆ.

೩. ಜನನೇಂದ್ರಿಯದಿಂದ ಲೋಳೆಯಂತಹ ದ್ರವ ಸೋರುತ್ತದೆ.

೪. ಯೋನಿಯ ಹೊರಭಾಗ ಸ್ವಲ್ಪ ಊದಿರುತ್ತದೆ (ಮಡಿಲಿನ ಭಾಗ)

೫. ಒಮ್ಮೊಮ್ಮೆ ಸ್ವಲ್ಪ ರಕ್ತವೂ ಕಾಣಬಹುದು.

೬. ಯೋನಿಯ ಮಡಿಲು ಕೆಂಪಗೆ ಹೊಳೆಯುತ್ತಿರುತ್ತದೆ.

೭. ಬೆನ್ನಿನ ಮಧ್ಯಭಾಗದಲ್ಲಿ ಅಂಗೈಯಿಂದ ಒತ್ತಿದರೆ ಹಂದಿ ಹಾಗೇ ನಿಲ್ಲುತ್ತದೆ. ಈ ಲಕ್ಷಣ ಬಹಳ ಮುಖ್ಯ.

೮. ಸಲಗ ಕ್ರಾಸ್ ಮಾಡಲು ಹತ್ತಿದಾಗ ಸಹಕರಿಸುತ್ತದೆ. ಗಲಾಟೆ ಮಾಡುವುದಿಲ್ಲ. ಬೆದೆಗೆ ಬಂದ ಎರಡನೆಯ ದಿನ ಕ್ರಾಸ್ ಮಾಡಿಸುವುದು ಉತ್ತಮ. ಹೆಣ್ಣುಹಂದಿ ಬೆದೆಯಲ್ಲಿ ಇಲ್ಲದಿದ್ದರೆ ಸಲಗವನ್ನು ಕಚ್ಚಿ ಓಡಿಸುತ್ತದೆ.

ನೆನಪಿಡಬೇಕಾದ ಪ್ರಮುಖ ಅಂಶವೆಂದರೆ, ಸಲಗದ ಅಕ್ಕ, ತಂಗಿ ಹಾಗೂ ಹತ್ತಿರದ ಸಂಬಂಧದ ಹೆಣ್ಣು ಹಂದಿಗಳು ಹಿಂಡಿನಲ್ಲಿ ಇರಬಾರದು. ಇದ್ದರೆ ಒಳಸಂಕರಣ ಆಗುತ್ತದೆ. ಆಗ ಹುಟ್ಟುವ ಮರಿಗಳು ಕ್ಷೀಣಿಸುತ್ತವೆ. ಸಾಯುವ ಪ್ರಮಾಣ ಹೆಚ್ಚು.



ಹಂದಿ ಮರಿ ಹಾಕುತ್ತಿರುವುದು

ಬೆದೆಯಲ್ಲಿರುವ ಹೆಣ್ಣು ಹಂದಿಗಳನ್ನು ಸಲಗ ಮಾತ್ರ ಸುಲಭವಾಗಿ ಗುರುತಿಸುತ್ತದೆ. ಎಂಟು ಹತ್ತು ಹೆಣ್ಣು ಹಂದಿ ಮತ್ತು ಒಂದು ಉತ್ತಮ ಸಲಗವನ್ನು ಗುಂಪಿನಲ್ಲಿ ಬಿಡಬೇಕು. ಹೆಣ್ಣುಹಂದಿ ಗರ್ಭ ಧರಿಸಿದೆ ಎಂದು ಖಚಿತವಾಗುವವರೆಗೂ ಬೇರ್ಪಡಿಸಬಾರದು. ಹಸುಗಳಲ್ಲಿ ಮಾಡುವಂತಹ ಗರ್ಭಪರೀಕ್ಷೆ ಹಂದಿಗಳಲ್ಲಿ ಸಾಧ್ಯವಿಲ್ಲ. ತಜ್ಞ ಪಶುವೈದ್ಯರು ಮಾತ್ರ ಹಂದಿಯನ್ನು ಸರಿಯಾಗಿ ಗಮನಿಸಿ ಗರ್ಭ ನಿಂತಿದೆಯೇ ಇಲ್ಲವೆ ಎಂಬುದನ್ನು ಪರೀಕ್ಷೆ ಮಾಡುತ್ತಾರೆ.

ಕುತೂಹಲಕಾರಿ ಅಂಶಗಳು

೧. ಒಮ್ಮೆಲೆ ಹೆಣ್ಣು ಹಂದಿ ಎಂಟು ಹತ್ತು ಮರಿಗಳನ್ನು ಹಾಕುತ್ತದೆ.

೨. ಗರ್ಭಧಾರಣೆಯ ಅವಧಿ ನೂರಹನ್ನೆರಡರಿಂದ ನೂರ ಹದಿನೈದು ದಿನಗಳು (ಸುಮಾರು ನಾಲ್ಕು ತಿಂಗಳು)

೩. ಮರಿಗಳಿಗೆ ಹಾಲೂಡಿಸಬೇಕಾದ ಅವಧಿ ಎರಡು ತಿಂಗಳು

೪. ಮರಿ ಹಾಕಿದ ಹದಿನಾಲ್ಕು ದಿನಗಳಿಗೆ ಗರ್ಭಕೋಶ ಸಂಕುಚನಗೊಂಡು ಮಾಮೂಲು ಸ್ಥಿತಿಗೆ ಬರುತ್ತದೆ.

೫. ಆರು ತಿಂಗಳಿಗೊಮ್ಮೆ ಮರಿ ಪಡೆಯಬಹುದು.

೬. ಹಾಲೂಡಿಸುವ ಅವಧಿ ಕಡಮೆ ಮಾಡಿದರೆ ಎರಡೂಕಾಲು ವರ್ಷದಲ್ಲಿ ಐದು ಬಾರಿ ಮರಿಗಳನ್ನು ಪಡೆಯಲು ಸಾಧ್ಯವಿದೆ.

೭. ಒಂದು ಹೆಣ್ಣು ಹಂದಿಯಿಂದ ಐದಾರು ಸಲ ಸತತ ಪಡೆಯಬಹುದು.

ಮರಿಗಳ ಪಾಲನೆ

ಹಂದಿ ಮರಿ ಹಾಕುವ ಸಮಯದಲ್ಲಿ ನಾಯಿ, ಬೆಕ್ಕು, ಇಲಿ, ಹೆಗ್ಗಣ ಹತ್ತಿರ ಹೋಗದಂತೆ ಎಚ್ಚರಿಕೆ ವಹಿಸಬೇಕು. ಹುಟ್ಟಿದ ಮರಿಗಳ ಲೋಳೆಯನ್ನು ಸ್ವಚ್ಛ, ಒಣಬಟ್ಟೆಯಿಂದ ಒರೆಸಬೇಕು. ಹಂದಿಮರಿಯ ಬಾಯಿ, ಮೂಗನ್ನು ಹಿಂಡಿ ಲೋಳೆ

ತೆಗೆಯಬೇಕು. ಇದರಿಂದ ಮರಿಗಳು ಸುಲಭವಾಗಿ ಉಸಿರಾಡುತ್ತವೆ. ಮರಿಗಳನ್ನು ತಾಯಿ ಹಂದಿಯಿಂದ ಬೇರೆ ಮಾಡಬಾರದು. ಮರಿಗಳು ಗಿಣ್ಣು ಹಾಲನ್ನು ಸಾಕಷ್ಟು ಕುಡಿಯಲು ಬಿಡಬೇಕು. ಗಿಣ್ಣು ಹಾಲು ಕುಡಿಯುವುದರಿಂದ ಮರಿಗಳ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ಚಳಿ, ಗಾಳಿಗಳಿಂದ ಮರಿಗಳನ್ನು ಬೆಚ್ಚಗಿರಿಸಬೇಕು.

ಪ್ರತಿ ಮೂರು ವರ್ಷಕ್ಕೊಮ್ಮೆ ಎಲ್ಲ ಹಂದಿಗಳನ್ನು ಮಾರಬೇಕು. ನಂತರ ಹೊಸದಾಗಿ ಹಂದಿಗಳನ್ನು ಕೊಂಡು ತಂದು ಕ್ರಾಸ್ ಮಾಡಿಸಿ ಮರಿಗಳನ್ನು ಪಡೆಯಬೇಕು. ಹೀಗೆ ಮಾಡುವುದರಿಂದ ಹಂದಿಗಳ ಒಳಸಂಕರಣ ತಪ್ಪಿಸಬಹುದು.

ರೋಗಗಳು ಮತ್ತು ಹತೋಟಿ ಕ್ರಮಗಳು

ಹಂದಿಸಾಕಣೆ ಎಂದಕೂಡಲೇ ಎಲ್ಲರೂ ಹೆದರುವುದು ಮಿದುಳುಜ್ವರಕ್ಕೆ. ಹೆಚ್ಚಿನ ಜನರಿಗೆ ಹಾಗೂ ಆರೋಗ್ಯ ಇಲಾಖೆಯ ಕೆಲವರಿಗೆ ಈ ಕಾಯಿಲೆಯ ಬಗ್ಗೆ ಸರಿಯಾದ ಮಾಹಿತಿಯಿಲ್ಲದೆ ವಿನಾಕಾರಣ ದೊಡ್ಡ ಹಂದಿಗಳನ್ನು ಗುಂಡಿಟ್ಟು ಕೊಲ್ಲುತ್ತಿದ್ದಾರೆ.

ಮಿದುಳುಜ್ವರ ವಿಷಾಣು (ವೈರಸ್)ವಿನಿಂದ ಸೊಳ್ಳೆಗಳ ಮೂಲಕ ಮನುಷ್ಯನಿಗೆ ಬರುತ್ತದೆ. ಈ ವಿಷಾಣು 'ಆರ್.ಎನ್.ಎ' (ರೈಬೊನ್ಯೂಕ್ಲಿಯಿಕ್ ಆಮ್ಲ) ಗುಂಪಿಗೆ ಸೇರಿದೆ. 'ಆರ್ಬೋ' ಪಂಗಡಕ್ಕೆ ಸೇರಿದ 'ಫ್ಲೇವಿ' ವರ್ಗದಲ್ಲಿ 'ಟೋಗ' ಎಂಬ ಸಂತತಿಗೆ ಸೇರಿದೆ. ಇದು. ಮಿದುಳಜ್ವರದ ವಿಷಾಣುವಿನ ವಂಶಾವಳಿ. ಈ ವಿಷಾಣು ಸೊಳ್ಳೆಗಳ ಮೂಲಕ ಮನುಷ್ಯರ ರಕ್ತಕ್ಕೆ ಸೇರುತ್ತದೆ. ನಂತರ ಐದರಿಂದ ಹದಿನೈದು ದಿನಗಳಲ್ಲಿ ಈ ವಿಷಾಣು ಪಕ್ವಸ್ಥಿತಿಗೆ (ಇನ್‌ಕುಬೇಶನ್ ಪೀರಿಯಡ್) ಬರುತ್ತದೆ. ಸೊಳ್ಳೆಗಳಲ್ಲಿ ಒಂಬತ್ತರಿಂದ ಹನ್ನೆರಡು ದಿವಸಗಳಲ್ಲಿ ಇದು ಪಕ್ವಾವಸ್ಥೆ ತಲುಪುತ್ತದೆ.

ಮಿದುಳು ಜ್ವರ ಹೇಗೆ ಹರಡುತ್ತದೆ? ಇದು ಅನೇಕ ಸಾಕುಪ್ರಾಣಿಗಳಿಂದ ಸೊಳ್ಳೆಗಳ ಮೂಲಕ ಮನುಷ್ಯರಿಗೆ ಹರಡುತ್ತದೆ. ಹಂದಿಯೊಂದೇ ಕಾರಣವಲ್ಲ. ಇತರೆ ಪ್ರಾಣಿ ಪಕ್ಷಿ, ಪಾರಿವಾಳ, ಗುಬ್ಬಚ್ಚಿ, ತೋಳಗಳಿಂದಲೂ ಇದು ಹರಡಬಹುದು. ಗುಬ್ಬಚ್ಚಿಗಳ ರಕ್ತದಲ್ಲೂ ಈ ವಿಷಾಣುವನ್ನು ಪತ್ತೆ ಹಚ್ಚಲಾಗಿದೆ. ದನಕರುಗಳ ರಕ್ತದಲ್ಲೂ ಮಿದುಳುಜ್ವರದ

ವಿಷಾಣುಗಳನ್ನು ಪತ್ತೆ ಹಚ್ಚಿ ಪ್ರತ್ಯೇಕಿಸಿದ ದಾಖಲೆಗಳಿವೆ. ಶೇಕಡಾ ಐವತ್ತರಷ್ಟು ದನ, ಎಮ್ಮೆ, ಕರುಗಳು ರೋಗ ನಿರೋಧ ಶಕ್ತಿ ಪಡೆದುಕೊಳ್ಳುತ್ತದೆ. ಹಂದಿಗಳಲ್ಲಿ ನಾಲ್ಕರಿಂದ ಆರು ತಿಂಗಳ ಮರಿಗಳ ರಕ್ತದಲ್ಲಿ ಈ ವಿಷಾಣು ಇರುತ್ತದೆ. ದೊಡ್ಡ ಹಂದಿಗಳಲ್ಲಿ ಇರುವುದಿಲ್ಲ ಎಂಬುದು ಗಮನ ಸೆಳೆಯುವ ಅಂಶ.

ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ವಲಸೆ ಹೋಗುವ ಪ್ರಾಣಿ, ಪಕ್ಷಿಗಳು ಈ ರೋಗವನ್ನು ಹರಡುತ್ತವೆ. ದನಕರು, ಎಮ್ಮೆಗಳಿರುವ ಕಡೆ ಸೊಳ್ಳೆ ಹಾವಳಿ ಜಾಸ್ತಿ, ಇದು ಮುಖ್ಯ ಕಾರಣ. ಹಂದಿಯಲ್ಲ. ಕುರಿ, ಮೇಕೆ, ಕತ್ತೆ, ಕುದುರೆಗಳ ರಕ್ತದಿಂದಲೂ ಮಿದುಳುಜ್ವರದ ವಿಷಾಣುಗಳನ್ನು ಪತ್ತೆ ಹಚ್ಚಲಾಗಿದೆ. ಬಾವಲಿ ಹಾಗೂ ಕೋತಿಗಳಿಂದಲೂ ಈ ಜ್ವರ ಹರಡಬಹುದು. ಮನುಷ್ಯರಲ್ಲಿ ಈ ರೋಗ ಬಂದಾಗ ಸೊಳ್ಳೆಗಳು ಅವರನ್ನು ಕಚ್ಚಿ ನಂತರ ಬೇರೆಯವರನ್ನು ಕಚ್ಚಿದಾಗ ರೋಗ ಹರಡುತ್ತದೆ. ಹಾಗೆಂದು ಮನುಷ್ಯರನ್ನು ಗುಂಡಿಟ್ಟು ಕೊಲ್ಲುತ್ತಾರೆಯೇ?

ಜಪಾನ್ ಹೆಸರೇಕೆ? ಮಿದುಳುಜ್ವರವನ್ನು ಸಾವಿರದ ಒಂಬೈನೂರಾ ಇಪ್ಪತ್ನಾಲ್ಕರಲ್ಲಿ ಜಪಾನಿನಲ್ಲಿ ಮೊದಲಬಾರಿಗೆ ಪತ್ತೆಹಚ್ಚಲಾಯಿತು. ಆದ್ದರಿಂದ ಇದಕ್ಕೆ 'ಜಪಾನ್ ಮಿದುಳುಜ್ವರ' ಎಂಬ ಹೆಸರು ಬಂತು. ನಂತರ ತಮಿಳುನಾಡಿನ ಆರ್ಕಾಟ್ ಹಾಗೂ ಆಂಧ್ರದ ಚಿತ್ತೂರು ಜಿಲ್ಲೆಗಳಲ್ಲಿ ಈ ವಿಷಾಣು ಮಿದುಳುಜ್ವರವನ್ನು ಹರಡಿತು. ಆಮೇಲೆ ವೆಲ್ಲೂರಿನ ಕ್ರಿಶ್ಚಿಯನ್ ವೈದ್ಯಕೀಯ ಕಾಲೇಜಿನಲ್ಲಿ ಮನುಷ್ಯರಲ್ಲಿ ಈ ವಿಷಾಣುವನ್ನು ಪತ್ತೆ ಹಚ್ಚಿದರು. ಆನಂತರದಲ್ಲಿ ಕೇರಳದಲ್ಲಿ ಇದು ಕಾಣಿಸಿಕೊಂಡಿತು. ಗುಜರಾತ್, ಹಿಮಾಚಲ ಪ್ರದೇಶ, ಕಾಶ್ಮೀರ, ಹರಿಯಾಣ, ರಾಜಸ್ತಾನದಲ್ಲಿ ಈ ಕಾಯಿಲೆ ಗಮನಾರ್ಹವಾಗಿ ಕಂಡುಬಂದಿಲ್ಲ. ದಕ್ಷಿಣ ಭಾರತದಲ್ಲಿ ಜಾಸ್ತಿ. ಇದಕ್ಕೆ ನಿರ್ದಿಷ್ಟ ಕಾರಣಗಳೂ ಗೊತ್ತಾಗಿಲ್ಲ. ಕರ್ನಾಟಕದಲ್ಲಿ ಈ ರೋಗ ಪ್ರತಿವರ್ಷ ಅಕ್ಟೋಬರ್, ನವೆಂಬರ್, ಡಿಸೆಂಬರ್‌ನಲ್ಲಿ ಹೆಚ್ಚಾಗಿ ಹರಡುತ್ತದೆ. ವಾತಾವರಣದಲ್ಲಿ ತೇವಾಂಶ ಹೆಚ್ಚಿ ಕೊಚ್ಚೆ ನೀರು ನಿಂತು ಸೊಳ್ಳೆಗಳು ಹೆಚ್ಚಿದರೆ ಈ ರೋಗ ಹರಡುವುದು ಖಂಡಿತ.

ರೋಗ ಲಕ್ಷಣಗಳು: ತಲೆನೋವು, ವಿಪರೀತ ಜ್ವರ, ವಾಂತಿ, ಮೈನಡುಕ, ನರದೌರ್ಬಲ್ಯತೆ ಹಾಗೂ ಪ್ರಜ್ಞೆ ತಪ್ಪುವುದು. ದೊಡ್ಡವರಿಗಿಂತ ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ಕಡಮೆ. ಆದ್ದರಿಂದ ಮಕ್ಕಳು ಬೇಗನೆ ಈ ರೋಗಕ್ಕೆ ಬಲಿಯಾಗುತ್ತಾರೆ. ಹೆಣ್ಣು ಮಕ್ಕಳಿಗಿಂತ ಗಂಡುಮಕ್ಕಳಲ್ಲಿ ಈ ರೋಗ ಬೇಗನೆ ಕಾಣಿಸಿಕೊಳ್ಳುತ್ತದೆ. ಬಹುಶಃ ಪ್ರಕೃತಿಯೇ

ಕಾರಣವಿರಬಹುದು. ವೈದ್ಯಕೀಯ ದೃಷ್ಟಿಯಿಂದ ಗಮನಿಸಿದಾಗ ಗಂಡಸರಿಗಿಂತ ಹೆಂಗಸರಲ್ಲಿ ರೋಗನಿರೋಧಕ ಶಕ್ತಿ ಹೆಚ್ಚು ಎಂಬುದು ನಿಜವಾಗಿದೆ.

ಕಾಯಿಲೆ ಯಾವುದೇ ಇರಲಿ, ಮಿದುಳಿನ ಉರಿಯೂತ ಕಂಡುಬಂದರೆ 'ಎನ್‌ಸೆಫಲೈಟಿಸ್' ಎನ್ನುತ್ತೇವೆ. ಎನ್‌ಸೆಫಲೈಟಿಸ್ ಎಂದರೆ ಮಿದುಳಿನ ಉರಿಯೂತ ಅಷ್ಟೆ. ಇದಕ್ಕೆ ಅನೇಕ ರೋಗ ಕಾರಕಗಳಿವೆ. ಉದಾ: ಮೀಸಲ್ಸ್, ಪೋಲಿಯೊ, ಹರ್ಪಿಸ್, ಹುಚ್ಚುನಾಯಿ ರೋಗ, ಕ್ಷಯದಲ್ಲೂ ಮಿದುಳುರಿತ ಉಂಟಾಗಬಹುದು. ವೈದ್ಯರು ಕಾರಣವನ್ನು ಸರಿಯಾಗಿ ಪತ್ತೆ ಹಚ್ಚಬೇಕು ಅಷ್ಟೆ. ರೋಗಾಣುವನ್ನು ಮೊದಲು ರೋಗಿಯ ರಕ್ತದಿಂದ ಪತ್ತೆ ಹಚ್ಚಿ ಮಿದುಳುಜ್ವರ ಹೌದೇ ಅಲ್ಲವೆ ಎಂಬುದನ್ನು ನಿರ್ಧರಿಸಬೇಕು. ಅನಿಷ್ಟಕ್ಕೆಲ್ಲ ಶನೇಶ್ವರನೇ ಕಾರಣ ಎಂಬಂತೆ ಎಲ್ಲ ಮಿದುಳು ಜ್ವರಕ್ಕೂ ಹಂದಿಯೇ ಕಾರಣ ಎನ್ನಬಾರದು. ರೋಗ ಹರಡುವ ಸೊಳ್ಳೆಗಳನ್ನು ಗುಂಡಿಟ್ಟು ಕೊಲ್ಲುತ್ತಾರೆಯೇ? ಸಾಧ್ಯವೇ? ಸೊಳ್ಳೆಗಳ ನಿರ್ಮೂಲನಕ್ಕೆ ಸಾರ್ವಜನಿಕ ಆರೋಗ್ಯ ಇಲಾಖೆಯವರು ಸರಿಯಾದ ಕ್ರಮಗಳನ್ನು ಸಕಾಲದಲ್ಲಿ ಕೈಗೊಳ್ಳಬೇಕು.

ಸೊಳ್ಳೆಗಳನ್ನು ನಾಶಮಾಡಲು ಸಾಧ್ಯವಾಗದೆ ಹಂದಿಗಳನ್ನು ಮಾತ್ರ ಗುಂಡಿಟ್ಟು ಅಮಾನುಷವಾಗಿ ಕೊಲ್ಲುತ್ತಿದ್ದಾರೆ. ಇದು ತಪ್ಪು. ಕೊಂದು ಹಂದಿಗಳ ಶವಪರೀಕ್ಷೆ ನಡೆಸಿದ್ದಾರೆಯೇ? ಅದನ್ನು ಮಾಡಿ ಮಿದುಳಿನಲ್ಲಿ ಅಥವಾ ರಕ್ತದಲ್ಲಿ ಈ ರೋಗಾಣುವನ್ನು ಪತ್ತೆ ಹಚ್ಚಿದರೆ ಮಾತ್ರ ಮಿದುಳು ಜ್ವರವಿದೆ ಎಂದು ಹೇಳಬಹುದು. ಆಗಲೂ ಅಷ್ಟೆ-ನಾಶ ಮಾಡಬೇಕಾದ್ದು ಸೊಳ್ಳೆಗಳನ್ನು, ಹಂದಿಗಳನ್ನಲ್ಲ.

ನಿವಾರಣೆ: ಮಿದುಳು ಜ್ವರ ಹರಡಲು ಸೊಳ್ಳೆಗಳೇ ಕಾರಣ. ಸೊಳ್ಳೆಗಳ ನಾಶವೇ ಮಿದುಳಜ್ವರದ ಹತೋಟಿಗೆ ರಾಮಬಾಣ. ಸಾಮಾನ್ಯವಾಗಿ 'ಅನಾಫಿಲಿಸ್' ಮತ್ತು 'ಕ್ಯುಲೆಕ್ಸ್' ಗುಂಪಿನ ಸೊಳ್ಳೆಗಳು ಈ ರೋಗವನ್ನು ಹರಡುತ್ತವೆ.

ಹಂದಿ ರೋಗಗಳು: ಹಂದಿಯ ಜ್ವರ, ಕಾಲು ಬಾಯಿ ರೋಗ, ಹಂದಿಸಿಡುಬು - ಇವು ವಿಷಾಣುಗಳಿಂದ (ವೈರಸ್) ಬರುವ ಕಾಯಿಲೆಗಳು.

ಇಸಬು, ಗಳಲೆರೋಗ (ಹಂದಿಪ್ಲೇಗ್) ನೆರಡಿರೋಗ, ಸಾಂಕ್ರಾಮಿಕ ರಕ್ತ ಬೇಧಿ, ಗರ್ಭಪಾತ (ಕಂದು ಹಾಕುವರೋಗ), ಇನ್‌ಫ್ಲುಯೆಂಜ, ಟೈಫಾಯಿಡ್, ಕ್ಷಯ - ಇವು ಏಕಾಣುಜೀವಿ(ಬ್ಯಾಕ್ಟೀರಿಯಾ)ಗಳಿಂದ ಬರುವ ಕಾಯಿಲೆಗಳು.

ಹತೋಟಿಕ್ರಮ

೧) ರೋಗಬಾರದಂತೆ ಕಾಲಕಾಲಕ್ಕೆ ಹಂದಿಗಳಿಗೆ ತಜ್ಞ ಪಶುವೈದ್ಯರಿಂದ ಲಸಿಕೆ ಚುಚ್ಚುಮದ್ದನ್ನು ಹಾಕಿಸಬೇಕು.

೨) ಪ್ರತಿ ಎರಡು ತಿಂಗಳಿಗೊಮ್ಮೆ ಹೊಟ್ಟೆಹುಳ (ಜಂತು) ನಿರ್ಮೂಲನಕ್ಕೆ ಔಷಧಿ ಕೊಡಿಸಬೇಕು. ಬೇರೆ ಲಸಿಕೆ ಚುಚ್ಚುವ ಎರಡು ಮೂರು ವಾರಗಳ ಮುಂಚೆ ಜಂತು ಔಷಧಿ ಹಂದಿಗಳಿಗೆ ಕೊಡಬೇಕು. ಆಗ ಉತ್ತಮ ರೋಗ ನಿರೋಧಕ ಶಕ್ತಿ ಬರುತ್ತದೆ.

೩) ಕಾಯಿಲೆ ಬಂದಿರುವ ಹಂದಿಗಳನ್ನು ಹಿಂಡಿನಿಂದ ಕೂಡಲೇ ಪ್ರತ್ಯೇಕಿಸಬೇಕು.

೪) ಹಂದಿ ಮನೆಗಳಲ್ಲಿ ಫಿನೈಲ್ ಕ್ರಿಮಿನಾಶಕದ ಸಿಂಪರಣೆಯನ್ನು ಪ್ರತಿ ದಿನ ಮಾಡಬೇಕು.

೫) ರೋಗದ ಹಂದಿಗಳನ್ನು ಮುಟ್ಟಿದ ನಂತರ ಕೈಕಾಲುಗಳನ್ನು ಡೆಟಾಲ್ ದ್ರಾವಣದಿಂದ ತೊಳೆದುಕೊಳ್ಳಬೇಕು.

೬) ಮರಿಗಳಲ್ಲಿ ರಕ್ತಹೀನತೆಯಾಗದಂತೆ ಕಬ್ಬಿಣ ಸತ್ವದ ಚುಚ್ಚುಮದ್ದನ್ನು ಮರಿ ಹುಟ್ಟಿದ ನಾಲ್ಕನೇ ಮತ್ತು ಹದಿನಾಲ್ಕನೇ ದಿನ ಪಶುವೈದ್ಯರಿಂದ ಕೊಡಿಸಬೇಕು.

೭) ಮರಿಗಳಲ್ಲಿ ಮೂಳೆ ಚೆನ್ನಾಗಿ ಬೆಳೆದು ಆರೋಗ್ಯ ವೃದ್ಧಿಸಲು ಕ್ಯಾಲ್ಸಿಯಂ ಟಾನಿಕ್ ಕುಡಿಸಬೇಕು.

೮) ಸೋಂಕು ತಗುಲಿದ ಹಂದಿ ಅಥವಾ ಮರಿ ಸತ್ತಾಗ ಪಶುವೈದ್ಯರಿಂದ ಶವ ಪರೀಕ್ಷೆ ಮಾಡಿಸಬೇಕು.

ಹಂದಿ ಸಾಕಣೆಯಲ್ಲಿ ಯಾವುದೇ ತೊಂದರೆ ಬಂದಾಗ ಕೂಡಲೇ ತಜ್ಞ ಪಶುವೈದ್ಯರಿಗೆ ತಿಳಿಸಬೇಕು. ಅವರ ಸಲಹೆ ಸರಿಯಾಗಿ ಪಾಲಿಸಬೇಕು. ಕಾಯಿಲೆ ಬರುವ ಮೊದಲೇ ನಿವಾರಣ ಕ್ರಮ ಕೈಗೊಳ್ಳುವುದು ಜಾಣತನವಲ್ಲವೇ ?

ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ಮಟ್ಟದವರೆಗೆ ಉತ್ತಮ ಹಾಗೂ ಉಪಯುಕ್ತವಾದ ಪಠ್ಯಪುಸ್ತಕಗಳನ್ನು ನಿರ್ಮಾಣ ಮಾಡುವ ಸಲುವಾಗಿ 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು ತೆರೆದಿದೆ. ಇದರ ಮೊದಲ ಪ್ರಯತ್ನವಾಗಿ ನವಸಾಕ್ಷರರಿಗಾಗಿ ಪಠ್ಯಪುಸ್ತಕ ರಚನೆ ಮಾಡಬೇಕೆಂದು ಚಿಂತಿಸುತ್ತಿರುವಾಗ ಬೆಂಬಲಕ್ಕೆ ಬಂದುದು ಲೋಕ ಶಿಕ್ಷಣ ಇಲಾಖೆ. ನವಸಾಕ್ಷರರಿಗಾಗಿ ಪುಸ್ತಕ ಬರೆಸುವ ತಮ್ಮಲ್ಲಿದ್ದ ಯೋಜನೆಯನ್ನು ಅವರು ನಮ್ಮ ವಿಶ್ವವಿದ್ಯಾಲಯಕ್ಕೆ ವಹಿಸಿಕೊಟ್ಟರು. ವಿಶ್ವವಿದ್ಯಾಲಯವು ಈ ಯೋಜನೆಯನ್ನು ಸಂತಸದಿಂದ ಸ್ವೀಕರಿಸಿ, ಕೂಡಲೇ ನಾಡಿನ ಪ್ರಖ್ಯಾತ ಲೇಖಕರನ್ನು, ಭಾಷಾತಜ್ಞರನ್ನು, ಶಿಕ್ಷಣತಜ್ಞರನ್ನು ಒಳಗೊಂಡಂತೆ ಸಲಹಾ ಸಮಿತಿಯನ್ನು ರಚಿಸಿ, ಅವರೆಲ್ಲರ ಅಭಿಪ್ರಾಯ, ಸಲಹೆ, ಸಹಕಾರಗಳನ್ನು ಕೇಳಿ ಕಾರ್ಯೋನ್ಮುಖವಾಯಿತು. ಪುಸ್ತಕಗಳ ವಸ್ತು, ಭಾಷೆ, ಮುದ್ರಣ ವಿನ್ಯಾಸ, ಚಿತ್ರಗಳ ಮಹತ್ವ, ಸಾಹಿತ್ಯಕ ಗುಣಮಟ್ಟ ಇತ್ಯಾದಿಗಳನ್ನು ಕುರಿತು ಸಮಿತಿಯು ಅನೇಕ ಸಲ ಚರ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಚಿಸಿತು.

ನವಸಾಕ್ಷರರಿಗಾಗಿ ಕನ್ನಡದಲ್ಲಿ ಹಾಗೂ ದೇಶದ ಇತರ ಭಾಷೆಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಪುಸ್ತಕಗಳನ್ನೆಲ್ಲ ಒಟ್ಟುಗೂಡಿಸಿ, ಅವುಗಳ ಮಾದರಿ, ಮಾಹಿತಿಗಳನ್ನೆಲ್ಲ ಭಾಷಾತಜ್ಞರಿಂದ ಪರಿಶೀಲಿಸಲಾಯಿತು. ಜೊತೆಗೆ ಈ ಕ್ಷೇತ್ರದ ಅನುಭವಿ ಕ್ಷೇತ್ರಸಹಾಯಕರನ್ನು ನೇಮಿಸಿಕೊಂಡು ಅವರಿಗೆ ಕಮ್ಮಟಗಳನ್ನು ನಡೆಸಿ, ಪ್ರಶ್ನಾವಳಿ ತಯಾರಿಸಿಕೊಟ್ಟು, ಅವರನ್ನು ರಾಜ್ಯದಾದ್ಯಂತ ಆಯ್ದ ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ ಆಂದೋಲನದಲ್ಲಿ ಕಲಿತವರಿಂದ ಮತ್ತು ಕಲಿಯುತ್ತಿರುವವರಿಂದ ಅದರ ಗುಣದೋಷಗಳ ಬಗ್ಗೆ ಅಭಿಪ್ರಾಯ ಸಲಹೆಗಳನ್ನು ಸಂಗ್ರಹಿಸಿ, ಅನಂತರ ಅವುಗಳನ್ನೆಲ್ಲ ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ ವಿಶ್ಲೇಷಿಸಲಾಯಿತು; ಮತ್ತೆ ಮತ್ತೆ ಕ್ಷೇತ್ರಗಳಿಗೆ ಹೋಗಿ, ಕ್ಷೇತ್ರ ಸಹಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ ಮರು ಪರಿಶೀಲನೆ ಮಾಡಿ, ನಂತರ ನವಸಾಕ್ಷರರ ಅಪೇಕ್ಷೆಗೆ ಅನುಗುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತಕ ರಚನೆಗೆ ತೊಡಗಲಾಯಿತು; ಪ್ರಖ್ಯಾತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು